# 2

# ಯೋಸೇಫನಿಗೆ ಘೋಷಣೆ ಮತ್ತು ಕನ್ಯೆಯಲ್ಲಿ ಜನನ

# (1:18-25)

ಯೇಸುವಿನ ತಂದೆ ತಾಯಿಯವರ ಚಿರಪರಿಚಿತವಾದ ಕಥೆಯು 1:18-25ರಲ್ಲಿ ಹೇಳಲಾಗಿದೆ. ಯೋಸೇಫ ಮತ್ತು ಮರಿಯಳ ಕುಟುಂಬಕ್ಕೆ, ಮತ್ತು ವಿಶೇಷವಾಗಿ ಮರಿಯಳಿಗೆ ಯೇಸುವಿನ ಜನನದ ಘೋಷಣೆ ಎಂಥಹಾ ಆಶ್ಚರ್ಯಕರವಾಗಿದೆ ಎಂದು ನಾವು ಕೇವಲ ಕಲ್ಪಿಸಿಕೊಳ್ಳಬಹುದಷ್ಟೆ.

ಈ ಘಟನೆಯು ಯೇಸು ಪ್ರವಾದನೆಯನ್ನು ನೆರವೇರಿಸಿದನು ಎಂದು ಒತ್ತಿ ಹೇಳುತ್ತದೆ; ದೇವರ ಯೋಜನೆಯು ಯುಗಗಳ ಕಾಲಾವಧಿಯ ಮುಖಾಂತರ ಅಂತಿಮವಾಗಿ ಪ್ರಕಾಟವಾಗಿದೆ. ಯೇಸು ಸಾಮಾನ್ಯ ಮನುಷ್ಯನಲ್ಲವೆಂದು ತೋರಿಸುತ್ತದೆ; ಆತನ ಜನನವು ಪವಿತ್ರಾತ್ಮನಿಂದ ಆಗಿರುವದು. ಆತನು ನಿಶ್ಚಿಯವಾಗಿ ಶರೀರದಾರಿಯಾದ ದೇವರು. ಈ ವಾಕ್ಯಭಾಗವು ಆತನ ಭೂಲೋಕದ ತಂದೆ ತಾಯಿಯರ ನೀತಿಯ ಗುಣಗಳನ್ನು ತೋರಿಸುತ್ತದೆ. ಯೇಸುವು ಈ ಲೋಕಕ್ಕೆ ಬಂದ ರೀತಿಯಲ್ಲಿ ಯಾವುದೇ ಅಪನಿಂದೆ, ಕಳಂಕ, ಇರುವುದಿಲ್ಲ.

## ಸಂಕಟದ ಸಂದರ್ಭ - "ಕೂಸಿನೊಂದಿಗೆ ಇರುವದನ್ನು ಕಂಡುಕೊಂಡರು" (1:18)

**18ಯೇಸು ಕ್ರಿಸ್ತನ ಜನನವು ಹೇಗಾಯಿತಂದರೆ - ಆತನ ತಾಯಿಯಾದ ಮರಿಯಳನ್ನು ಯೋಸೇಫನಿಗೆ ನಿಶ್ಚಿಯಮಾಡಿರಲಾಗಿ ಅವರು ಕೂಡುವದಕ್ಕಿಂತ ಮುಂಚೆ ಆಕೆಯು ಪವಿತ್ರಾತ್ಮನಿಂದ ಬಸುರಾಗಿದ್ದದ್ದು ತಿಳಿದು ಬಂತು.**

**ವಚನ 18.** *Genesis* ಗ್ರೀಕ್ ಶಬ್ದವನ್ನು, **ಜನನ**ವೆಂದು 1:18ರಲ್ಲಿ ಅನುವಾದಿಸಲಾಗಿದೆ, ಇದು 1:1ರಲ್ಲಿ ಪುನಾರಾವರ್ತನೆಯಾಗಿದೆ. ಇದು "ವಂಶಾವಳಿಯಲ್ಲಿ" ಅನುವಾದಿಸಲ್ಪಟ್ಟಿದೆ. ಮೆಸ್ಸೀಯನ ಮಾನವ ವಂಶಪಾರಂಪರ್ಯ ಮೂಲವನ್ನು ಪ್ರಾರಂಭಿಸಿ ಮೊದಲಿನ ವಚನಗಳು ಹೇಳಿದವು, ಈ ಲೋಕದಲ್ಲಿ **ಯೇಸು ಕ್ರಿಸ್ತನು** ಬರುವದರ ಕುರಿತು ಹತ್ತಿರವಾದ ನೋಟವನ್ನು ತರುವಾಯ ವಚನಗಳು ಸ್ಪಷ್ಟವಾದ ಸಮಚಾರವನ್ನು ಒದಗಿಸುತ್ತವೆ.

**ಆತನ ತಾಯಿಯಾದ ಮರಿಯಳನ್ನು[1] ಯೋಸೇಫನಿಗೆ ನಿಶ್ಚಿಯ ಮಾಡಿರಲಾಗಿತ್ತು.** ಹಿಂದಿನ ಯೆಹೂದ್ಯರ ಕಾಲದಲ್ಲಿ, ಮಾಡಲ್ಪಡುವ ನಿಶ್ಚಿಯ ಕಾರ್ಯವು ಇಂದಿನ ನವಯುಗದ ನಿಶ್ಚಿಯ ಕಾರ್ಯಕ್ಕಿಂತಲೂ ಹೆಚ್ಚಿನ ಬಂಧನವಿದ್ದಿತ್ತು (ಧರ್ಮೋಪದೇಶಕಾಂಡ 20:7).[2] ನಿಶ್ಚಯಮಾಡಿಕೊಂಡಿರುವ ದಂಪತಿಗಳು ಅವಶ್ಯವಾಗಿ ಮದುವೆಯಾಗಿದ್ದವರು ಎಂದು ಅಭಿಪ್ರಾಯ ಹೊಂದಲಾಗಿತ್ತು, ಆದರೆ ಅವರು ಒಟ್ಟಿಗೆ ಜೊತೆಯಾಗಿರುತ್ತಿರಲಿಲ್ಲ. ಯೋಸೇಫ ಮತ್ತು ಮರಿಯಳ ವಿಷಯದಲ್ಲಿ, ಅವರನ್ನು "ಗಂಡ" (1:19) ಮತ್ತು "ಹೆಂಡತಿ" ಎಂದು ಕರೆಯಲಾಗಿತ್ತು (1:20).[3] ನಿಶ್ಚಿಯ ಮಾಡಿಕೊಂಡ ಗಂಡಸು ಈ ಸಂಬಂಧವನ್ನು ಬಿಟ್ಟುಬಿಡಲು ಇಚ್ಛೆಯುಳ್ಳವನಾಗಿದ್ದರೆ, ಮದುವೆಯ ಮುಂಚೆ ಇವನು "ತ್ಯಾಗಪತ್ರವನ್ನು" ಆ ಹೆಂಗಸಿನ ಕೈಯಲ್ಲಿ ಕೊಡಬೇಕು, ಅವರು ಮದುವೆಯಾದಾಗ ಯಾವ ರೀತಿಯಲ್ಲಿ ಮಾಡುತ್ತಾರೋ ಆ ರೀತಿಯಲ್ಲಿಯೇ ಮಾಡಬೇಕು (ಧರ್ಮೋಪದೇಶಕಾಂಡ 24:1-4; ಮಾರ್ಕ 10:4).[4] ಈ ತ್ಯಾಗಪತ್ರವು ಕೊನೆಪಕ್ಷ ಇಬ್ಬರು ಸಾಕ್ಷಿಗಳಿಂದ ಹಸ್ತಾಕ್ಷರ ಮಾಡಿಸ

ಬೇಕು, ಅಥವಾ ಈ ತ್ಯಾಗ ಪತ್ರವನ್ನು ಗಂಡನಿಂದ ಹೆಂಡತಿಗೆ ಕೊಡುವಾಗ ಕೊನೆಪಕ್ಷ ಇಬ್ಬರು ಸಾಕ್ಷಿಗಳ ಮುಂದೆ ಕೊಡಬೇಕು.[5] ಈ ಕಾರ್ಯಕ್ಕಾಗಿ ನ್ಯಾಯಧೀಶರಾಗಲಿ ಅಥವಾ ನ್ಯಾಯಲಯವಾಗಲಿ ಬೇಕಾಗುವುದಿಲ್ಲ. ಅವರ ಮಿಶ್ನಾ (ಟಾಲ್ಮೆಂಡ್‌ನಲ್ಲಿನ ಮೊದಲನೆಯ ಭಾಗ - ಯೆಹೂದ್ಯರ ನಿಯಮಗಳು) ಪ್ರಕಾರ ಆ ತ್ಯಾಗಪತ್ರವನ್ನು ಈ ರೀತಿಯಲ್ಲಿ ಓದಲಾಗುತ್ತದೆ, "ಇಗೋ ನೀನು ಯಾರನ್ನಾದರೂ [ಮದುವೆ] ಯಾಗಲು ಅವಕಾಶ ಮಾಡಿಕೊಡಲಾಗಿದೆ."[6] ನಿಶ್ಚಯ ಮಾಡಿಕೊಂಡವರು ಒಂದು ವೇಳೆ ಮದುವೆ ಸಂಪೂರ್ಣವಾಗಿ ಮುಗಿಯುವದರೊಳಗಾಗಿ ಯಾರಾದರು ಒಬ್ಬರು ಸತ್ತುಹೋದರೆ, ಉಳಿದವರನ್ನು ವಿಧವೆ ಅಥವಾ ವಿಧುರನೆಂದು ಪರಿಗಣಿಸುತ್ತಿದ್ದರು. ನಿಶ್ಚಯ ಕಾಲದ ಅವಧಿ ಕನಿಷ್ಟವೆಂದರೆ ಕೆಲವು ತಿಂಗಳಿನಿಂದ ಒಂದು ವರ್ಷದವರೆಗೆ ಇರುತ್ತದೆ, ನಂತರ ವಧುವರರನ್ನು ಮದುವೆಯ ದಿಬ್ಬಣದೊಂದಿಗೆ ಬಂದು ವಧುವನ್ನು ಸ್ವೀಕರಿಸಿಕೊಂಡು ಮತ್ತು ಮದುವೆಯಾಗುವ ಸ್ಥಳಕ್ಕೆ ಹೋಗುವರು ಮತ್ತು ಅವರು ತಮ್ಮ ಕುಟುಂಬವನ್ನು ಮಾಡಿಕೊಳ್ಳುವರು (ನೋಡಿರಿ 22:1-14; 25:1-13).

**ಅವರಿಬ್ಬರು ಕೂಡುವ ಮೊದಲೆ ಪವಿತ್ರಾತ್ಮನಿಂದ ಆಕೆಯು ಮಗುವನ್ನು ಹೊಂದಿದಳು.** ಲೂಕನ ಸುವಾರ್ತೆಯು ಮರಿಯಳಿಗೆ ದೇವದೂತರು ಮುಂತಿಳಿಸಿದ್ದನು ಸಂಪೂರ್ಣವಾಗಿ ವಿವರಿಸುತ್ತದೆ ಮತ್ತು ಮರಿಯಳು ಎಲಿಜೇಬೇತನೊಂದಿಗೆ ಮೂರು ತಿಂಗಳು ಇದದ್ದು ಸಹ ವಿವರಿಸುತ್ತದೆ (ಲೂಕ 1:26-56). ಈ ಸಮಯದ ನಂತರ ಆಕೆಯು ಮನೆಗೆ ಹಿಂತಿರುಗಿದಳು ಮತ್ತು ಕ್ರಮೇಣವಾಗಿ ಆಕೆಯ ಗರ್ಭದ ಸೂಚನೆಗಳು ಕಾಣಿಸತೊಡಗಿದವು. ಇಲ್ಲಿಯವರೆಗೂ ಯೋಸೇಫನು ಮರಿಯಳೊಂದಿಗೆ ಲೈಂಗಿಕ ಸಂಬಂಧ ಹೊಂದಿರಲಿಲ್ಲ, ಇದು ಆತನಿಗೆ ಆಕೆಯು ಅಪನಂಬಿಗಸ್ತಳಾಗಿದ್ದಳೆಂದು ಆತನಿಗೆ ಕಾಣಿಸಿತು. ಅಂದಿನ ನಿಯಮದಂತೆ ಅಪನಂಬಿಗಸ್ತನಾದ ಮನುಷ್ಯನನ್ನು ವ್ಯಭಿಚಾರಿ ಎಂದು ಅಭಿಪ್ರಾಯ ಹೊಂದಲಾಗಿತ್ತು, ಮತ್ತು ತಪ್ಪಿಗಸ್ಥನನ್ನು ಕಲ್ಲೆಸೆದು ಸಾಯಿಸಬಹುದಾಗಿತ್ತು (ಧರ್ಮೋಪದೇಶಕಾಂಡ 22:23, 24).

## ಆಶೀರ್ವಾದ - ಮಗನು ರಕ್ಷಕನಾಗುವನು (1:19-21)

**[19]ಆದರೆ ಆಕೆಯ ಗಂಡನಾದ ಯೋಸೇಫನು ಸಜ್ಜನನಾಗಿದ್ದು ಆಕೆಯನ್ನು ಬೈಲಿಗೆ ತರುವದಕ್ಕೆ ಮನಸ್ಸಿಲ್ಲದೆ, ಯಾರಿಗೂ ತಿಳಿಯದಂತೆ ಆಕೆಯನ್ನು ಬಿಟ್ಟು ಬಿಡಬೇಕೆಂದಿದ್ದನು. [20]ಅವನು ಇದನ್ನು ಆಲೋಚಿಸುತ್ತಿರುವಾಗ ಕರ್ತನ ದೂತನು ಅವನಿಗೆ ಕನಸಿನಲ್ಲಿ ಕಾಣಿಸಿಕೊಂಡು - ಎಲೈ ಯೋಸೇಫನೇ, ದಾವೀದನ ವಂಶದವನೇ, ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿ ಕೊಳ್ಳುವದಕ್ಕೆ ಅಂಜಬೇಡ. ಆಕೆಯ ಗರ್ಭವು ಪವಿತ್ರಾತ್ಮದಿಂದಲೇ ಆದದ್ದು. [21]ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕೆಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು ಅಂದನು.**

**ವಚನ 19.** ಮರಿಯಳ **ಗಂಡನಾದ ಯೋಸೇಫನು,** ಯಾವಾಗ ಆಕೆ ಗರ್ಭಿಣಿಯೆಂದು ತಿಳಿದುಕೊಂಡನೋ ಮತ್ತು ಆ ಮಗುವಿಗೆ ತಂದೆ ತಾನೇ ಅಲ್ಲವೆಂದು ಗೊತ್ತಾಯ್ತೋ ಅವನ ಕಠಿಣವಾದ ನಿರ್ಧಾರ ಎದುರಿಸಬೇಕಾಯಿತು. **ಸಜ್ಜನನಾಗಿದ್ದು** ದೇವರ ಚಿತ್ತದಂತೆ ನಡೆಯಲು ಇಷ್ಟಪಟ್ಟನು, ಆದರೆ ಮರಿಯಳಿಗೆ **ಬೈಲಿಗೆ ತರುವದಕ್ಕೆ ಮನಸ್ಸಿಲ್ಲದೆ,** ಅಥವಾ ಕಲ್ಲೆಸೆದು, ಕೊಲ್ಲುವ ಸ್ಥಿತಿಗೆ ಆತನು ಇಷ್ಟಪಡಲಿಲ್ಲ, **ಯಾರಿಗೂ ತಿಳಿಯದಂತೆ ಆಕೆಯನ್ನು ಬಿಟ್ಟು ಬಿಡಬೇಕೆಂದಿದ್ದನು.** "ಕಳುಹಿಸಿಬಿಡು" (*apoluō*) ಎಂಬ ಕ್ರಿಯಾಪದ ಈ ಸಂದರ್ಭದಲ್ಲಿ "ವಿಚ್ಛೇಧನ" ಎಂದರ್ಥ. Donald A. Hagner ಹೀಗೆ ಹೇಳಿದ್ದಾರೆ, "ಯೋಸೇಫನು ಮರಿಯಳನ್ನು ವ್ಯಭಿಚಾರ ಸ್ತ್ರೀಯಂತೆ ತೋರಿಸುವದು ಆತನಿಗೆ ಬೇಕಾಗಿರಲಿಲ್ಲ, ಆತನು ಪಾಪದ ಅಪರಾಧ ಇರುವವಳನ್ನು ಮದುವೆಯಾಗಲು ಇಷ್ಟಪಡಲಿಲ್ಲ."[7]

ಕಲ್ಲೆಸೆಯುವದೋ ಅಥವಾ ಬೇಡವೋ ಎನ್ನುವದು ಯೋಸೇಫನ ಆಯ್ಕೆಯಾಗಿತ್ತು ಎಂಬ ಪ್ರಶ್ನೆ ಹಾಗೆಯೇ ಉಳಿದುಕೊಳ್ಳುತ್ತದೆ. Robert H. Gundry ರವರು ಗಮನಿಸಿ ಹೀಗೆ ಗುರುತಿಸಿದ್ದಾರೆ, "ಕೆಲವು ಗುರುಗಳ ಸಾಕ್ಷ್ಯಧಾರಗಳು ಸಲಹೆ ನೀಡುತ್ತವೆ, ಕಲ್ಲೆಸೆದು ಕೊಲ್ಲುವ ನಿರ್ಧಾರವು ಸಡಲಿಸಲಾಗಿದೆ ... , ಮತ್ತು ಅಪರಾಧಿಯಾಗಿರುವ ಗಂಡಸು ಇಲ್ಲಿ ಇಲ್ಲ ಎಂದು ಮತ್ತಾಯನ ಸುವಾರ್ತೆಯಲ್ಲಿ ಬರೆದಿದೆ."[8] ಹೆಂಗಸು ವ್ಯಭಿಚಾರ ಮಾಡುವಾಗ ಸಿಕ್ಕಿಬಿದ್ದಳು ಎಂಬುದರ ಬಗ್ಗೆ ವ್ಯಾಖ್ಯಾನಿಸುವಾಗ (ಯೋಹಾನ 7:53-8:11), ಮೊದಲನೆಯ ಶತಮಾನದಲ್ಲಿ ರೋಮನ್ನರಿಗೆ "ಮರಣದಂಡನೆ ವಿಧಿಸಲು ವಿಶೇಷವಾದ ಹಕ್ಕುಗಳು ಇದ್ದವು" ಎಂದು D. A. Carson ವಿವರಿಸಿದ್ದಾರೆ.[9] ಹೇಗಿದ್ದರೂ, ಕ್ರಿಸ್ತನ ಜನನದ[10] *ನಂತರ* ರೋಮನ್ನರು ಈ ಹಕ್ಕನ್ನು ಯೆಹೂದ್ಯರಿಂದ ತೆಗೆದುಕೊಂಡರು (ಹೇಳಿಕೆಗಳ ವಿವರಣೆ ನೋಡಿರಿ 10:18; 12:14).

ಯೋಸೇಫನು ತನ್ನ ವಧುವಿಗೆ ಕರುಣೆ ತೋರಿಸಲು ನಿರ್ಧರಿಸಿದನು, ಸಾರ್ವಜನಿಕವಾಗಿ ಅವಳ ಮರ್ಯಾದೆಯನ್ನು ಕಾಪಾಡಿದನು. Douglas R. A. Hare ಹೀಗೆ ಗುರುತಿಸಿದ್ದಾರೆ, "ಯೋಸೇಫನು ಇದನ್ನು ಸಿಟ್ಟಿನಿಂದ ಮಾಡಿರುವದಿಲ್ಲ, ಧರ್ಮದ ಆಳವಾದ ಗಾಢನಂಬಿಕೆಯಿಂದ ಮಾಡಿದ್ದಾನೆ."[11] "'ನನಗೆ ಕರಣೆಯೆ ಬೇಕು ಯಜ್ಞಬೇಡ' (ಹೋಶೆಯಾ 6:6; 9:13 ಮತ್ತು 12:7ರಲ್ಲಿಯೂ ಹೇಳಲಾಗಿದೆ) ಎನ್ನುವ ಮತ್ತಾಯನಿಗೆ ಪ್ರೀತಿಯುಳ್ಳ ಸೂತ್ರದೊಂದಿಗೆ ಯೋಸೇಫನು ಜೀವಿಸುತ್ತಿದ್ದರಿಂದ, ಆ ಸಂಬಂಧವನ್ನು ಬದಲಾಯಿಸುವ ನಿರ್ಧಾರ ಮಾಡಿದನು."[12]

**ವಚನ 20.** ಯೋಸೇಫನು ತನ್ನ ನಿರ್ಧಾರ ಮಾಡಿದ ನಂತರ, ಅವನು ಒಂದು **ಕನಸು** ಕಂಡನು, **ಅದರಲ್ಲಿ ಕರ್ತನ ದೂತನು ಅವನಿಗೆ** ಕಾಣಿಸಿಕೊಂಡು ಹೀಗೆ ಹೇಳಿದನು, **ಎಲೈ ಯೋಸೇಫನೇ, ದಾವೀದನ ಮಗನೆ ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿ ಕೊಳ್ಳುವದಕ್ಕೆ ಅಂಜಬೇಡ.** ಇದರ ಫಲವಾಗಿ, ಯೋಸೇಫನು ಮರಿಯಳನ್ನು ಬಿಟ್ಟು ಬಿಡುವ ಆಲೋಚನೆ ಬದಲಾಯಿಸಿದನು. "ಪ್ರಮಾಣಿಕವಾಗಿ ಮುಗ್ಧಳಾದ ಮರಿಯಳು ಯೋಸೇಫನ ಕುರಿತು ತನ್ನ ಮನಸ್ಸಿನಲ್ಲಿ ಆಲೋಚಿಸಿದ ಆಕ್ಷೇಪಣೆಗಳು ನಿಸ್ಸಂದೇಹವಾಗಿ ಈಗ ಸತ್ಯವಾಗಿವೆ ಎಂದು ನಿಶ್ಚಯವಾಗಿ ಕಾಣುತ್ತದೆ."[13]

ಯೋಸೇಫನ ಕನಸು ಜನನದ ವೃತ್ತಾಂತದ ಸರಣಿಯಲ್ಲಿ ಜೋಡಿಸಲಾಗಿದೆ (1:20; 2:12, 13, 19, 22). "ಯೋಸೇಫನು ಹಳೆ ಒಡಂಬಡಿಕೆಯ ಯೋಸೇಫನನ್ನು ಪ್ರತಿ ಬಿಂಬಿಸುತ್ತಾನೆ [ಯಾಕೋಬನ ಮಗ ಯೋಸೇಫನು], ಇವನು ಸಹ ನೀತಿಯುಳ್ಳವನು, ಕನಸುಗಳಿಂದ ಪ್ರಭಾವ ಬೀರಿದ್ದಾನೆ, ಮತ್ತು ಐಗುಪ್ತ ದೇಶದಲ್ಲಿ[14] ಪ್ರಯಾಣಿಸಲು ಒತ್ತಾಯಿಸಲ್ಪಟ್ಟನು ಎನ್ನುವದು ಗಮನಿಸಬೇಕಾದ ಕೆಲವು ವಿಷಯಗಳಲ್ಲಿ ಒಂದಾಗಿದೆ" ಎಂದು Robert H. Mounce ರವರು ಹೇಳಿದ್ದಾರೆ. Ben Witherington III ರವರು ಹೀಗೆ ವಿವರಿಸಿದ್ದಾರೆ,

> [ಮತ್ತಾಯನು] ಮರಿಯಳ ಜೀವಿತದಲ್ಲಿ ಬಂದಿರುವ ದೈವಿಕ ಮಧ್ಯಸ್ತಿಕೆಗೆ ಯೋಸೇಫನ ಪ್ರತಿಕ್ರಿಯೆ ಮೇಲೆ ಬೆಳಕು ಚೆಲ್ಲಿದ್ದಾನೆ, ಮತ್ತು ಪ್ರತ್ಯಕ್ಷವಾಗಿ ಯೋಸೇಫನು ಹೇಗೆ ದೇವರ ಚಿತ್ತಕ್ಕೆ ಕನಸುಗಳ ಮುಖಾಂತರ ನಡಿಸಲ್ಪಟ್ಟನು ಎನ್ನುವದನ್ನು ತೋರಿಸಿದ್ದಾನೆ. ಇದು ಆಕಸ್ಮಿಕವಲ್ಲ, ಈ ಕಥೆಗಳಲ್ಲಿ ಯೇಸುವಿನಿಂದಲೆ ಯೋಸೇಫನು ಮಾತ್ರ "ದಾವೀದ ಕುಮಾರನು" ಎಂದು ಕರೆಯಲ್ಪಟ್ಟನು. ಈತನು ಸಂಕಷ್ಟದಲ್ಲಿರುವಾಗ ಈತನಿಗೆ ಸಲಹೆ ನೀಡಿ, ಮರಿಯಳನ್ನು ಮತ್ತು ಯೇಸುವನ್ನು ದೇವರ ಮಾರ್ಗದರ್ಶನದಂತೆ ಕಾಪಾಡಿದ ಮೂಲ ಪುರುಷನಂತೆ ಪರಿಗಣಿಸಲಾಗಿದೆ.[15]

ಈ ಶೀರೋನಾಮೆ "ದಾವೀದ ಕುಮಾರನು" ಎನ್ನುವದು ಯೋಸೇಫನು, ಯೇಸುವಿಗೆ

ಸ್ವೀಕರಿಸಲ್ಪಟ್ಟಿರುವ ತಂದೆಯೆಂದು ತೋರಿಸುತ್ತದೆ, ಈತನು ದಾವೀದನ ಅರಸನ ಸಂತತಿಯಲ್ಲಿ ಬರುತ್ತಾನೆ - ಇದನ್ನು ಈಗಾಗಲೇ ವಂಶಾವಳಿಯಲ್ಲಿ ತೋರಿಸಲಾಗಿದೆ (1:1, 6, 16).

ಮರಿಯಳಿಗೆ ಘೋಷಣೆಯ ವಿಷಯದಲ್ಲಿ ಆಕೆಗೆ ಸಂದೇಶವನ್ನು ಮುಟ್ಟಿಸಿರುವ ದೇವದೂತನ ಹೆಸರು ಗಬ್ರಿಯೇಲ್ (1:26). ಯೋಸೇಫನ ವಿಷಯದಲ್ಲಿ ದೇವದೂತನ ಹೆಸರನ್ನು ಕೊಟ್ಟಿಲ್ಲ. ಮರಿಯಳಲ್ಲಿ ಗರ್ಭಧರಿಸಿರುವ **ಮಗ ... ಪವಿತ್ರಾತ್ಮನಿಂದಲೆ ಆಗಿದೆ** ಎಂದು ದೇವದೂತನು ಯೋಸೇಫನಿಗೆ ಹೇಳಿದನು. ಈ ಅದ್ಭುತವಾದ ಗರ್ಭಧಾರಣೆ ಕುರಿತ ಮತ್ತಾಯನ ವರ್ಣನೆ ಕಾದಿಟ್ಟುರುವದ್ದಾಗಿಯೂ ಮತ್ತು ಪೂಜ್ಯ ಭಾವನೆಯನ್ನೂ ಹೊಂದಿದೆ (1:18, 20). "ದೇವರು ಆಗಿರುವವನು ಒಬ್ಬ ಹೆಂಗಸಿನೊಂದಿಗೆ ಲೈಂಗಿಕ ಸಂಬಂಧವನ್ನು ಹೊಂದಿರುವನು ಎಂಬ ಅನ್ಯಜನರಲ್ಲಿರುವ ಭಾವನೆ [ಗ್ರೀಕ್ ಪುರಾಣದಲ್ಲಿ ಸಾಮಾನ್ಯವಾಗಿದೆ] ನಮ್ಮಲ್ಲಿ ಇಲ್ಲ. ಆದರೆ ನಿಜವಾಗಿಯೂ ಸೃಷ್ಟಿಮಾಡುವ ದೇವರ ಶಕ್ತಿಯು ತನ್ನ ಉದ್ದೇಶವನ್ನು ನೇರವೇರಿಸಲು ಮರಿಯಳಲ್ಲಿ ಕಾರ್ಯಮಾಡಿದನು"[16] ಎಂದು Hagner ವಿವರಿಸುತ್ತಾನೆ. ಮರಿಯಳು ಗರ್ಭಧರಿಸಲು ಆಕೆಯ ಗರ್ಭದಲ್ಲಿ ಪವಿತ್ರವಾದ ಬೀಜವನ್ನು ಪವಿತ್ರಾತ್ಮನು ಇಟ್ಟನು, ಆದ್ದರಿಂದ ಹುಟ್ಟುವವನು ಮಾನವ ಮತ್ತು ದೈವಿಕ ವ್ಯಕ್ತಿತ್ವವನ್ನು ಹೊಂದಿರುವನು (ಲೂಕನು 1:31-35). ಮರಿಯಳ ಗರ್ಭದಲ್ಲಿ ಕೂಸು ರೂಪಗೊಂಡಿತು, ಅದು ಮಾನವನ ದೇಹವನ್ನು ಮೇಲೂಡುಪಾಗಿ ಧರಿಸಿದ "ದೇವರ ವಾಕ್ಯ" (ಯೋಹಾನ 1:1, 14). ಧರ್ಮಗುರುಗಳು ಹೇಳಿದ ಆಲೋಚನೆಯನ್ನು ಸಂಕ್ಷಿಪ್ತವಾಗಿ ವರ್ಣಿಸಿ David Hill ಹೀಗೆ ಬರೆಯುತ್ತಾನೆ, "ದೇವರಾತ್ಮನು ಜಗತ್ತನ್ನು ಅದರ ಅಸ್ತಿವಾರವನ್ನು ಉಂಟುಮಾಡುವಾಗ ಕಾರ್ಯಮಾಡಿದ ರೀತಿಯಲ್ಲಿಯೇ ಆತ್ಮನು ಹೊಸ ರೂಪದಲ್ಲಿ ಕಾರ್ಯಮಾಡಲು ನಿರೀಕ್ಷಿಸಲಾಗಿದೆ."[17] ಮುಂದೆ ಆತನು ಹೀಗೆ ವಿವರಿಸಿದ್ದಾನೆ, "ಮತ್ತಾಯನು ಸೃಷ್ಟಿಸುವ ಶಕ್ತಿ ಮತ್ತು ದೇವರ ಕೆಲಸ ಕಾರ್ಯವನ್ನು (ಪವಿತ್ರಾತ್ಮ) ಹೊಸ ಸೃಷ್ಟಿಯನ್ನು ಪ್ರಾರಂಬೋತ್ಸವ ಮಾಡುವ ರೀತಿಯಲ್ಲಿ ವಿಮೋಚಕನಾದ ಮೆಸ್ಸೀಯನ ಗರ್ಭಧಾರಣೆಯ ವಿಷಯಗಳೆಲ್ಲವನ್ನು ಪ್ರಸ್ತಾಪ ಮಾಡಿದ್ದಾನೆ."[18]

**ವಚನ 21.** ಮರಿಯಳು ಒಂದು ಮಗುವನ್ನು ಹಡೆಯುವಳು, ನೀನು **ಆತನಿಗೆ** ಯೇಸು ಎಂದು **ಹೆಸರಿಡಬೇಕು; ಯಾಕೆಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು** ಎಂದು ಕರ್ತನ ದೂತನು ಯೋಸೇಫನಿಗೆ ಹೇಳಿದನು. ಇಬ್ರಿಯದಲ್ಲಿ "ಯೆಹೋವನೆ ರಕ್ಷಕನು"ಎಂದು ಅರ್ಥ ಕೊಡುವ "ಯೆಹೋಶುವ" (*Y*ᵉ*hoshua*‘) ಹೆಸರಿಗೆ, "ಯೇಸು" (*Iēsous*) ಎನ್ನುವದು ಗ್ರೀಕ್‌ರೂಪವಾಗಿದೆ. ದೇವರ ಕುಮಾರನು ಲೋಕಕ್ಕೆ ಬರುವ ಉದ್ದೇಶವನ್ನು ಈ ಸಾಮಾನ್ಯವಾದ ಯೆಹೂದ್ಯರ ಹೆಸರು ಸೂಚಿಸುವದರಿಂದ (ಅಪೊಸ್ತಲರ ಕೃತ್ಯಗಳು 13:6; ಕೊಲಸ್ಸೆ 4:11) ಆ ಹೆಸರನ್ನು ಆರಿಸಿಕೊಳ್ಳಲಾಗಿತ್ತು. ಆ ಉದ್ದೇಶವೇನೆಂದರೆ "ತನ್ನ ಜನರನ್ನು ಅವರ ಪಾಪಗಳಿಂದ ರಕ್ಷಿಸುವದು" (ನೋಡಿರಿ ಯೆಶಾಯ 53:5, 6; ಯೆರೆಮೀಯಾ 31:31-34; ಮತ್ತಾಯ 20:28; 26:26-28; ಗಲಾತ್ಯ 4:4, 5; 1 ತಿಮೋಥೆ 1:15).

ಹೆಸರಿನ ಅರ್ಥವನ್ನು ಕುರಿತು ಅಪ್ರಮಾಣಿಕ ಗ್ರಂಥಗಳು ಸ್ಪರ್ಧಿಸಿ ಹೇಳಿರುವದು ಈ ಕೆಳಗಿನ ಮಾತುಗಳಲ್ಲಿ ಕಾಣುತ್ತದೆ:

> *ನೂನನ ಮಗನಾದ ಯೆಹೋಶುವನು* ಯುದ್ಧದಲ್ಲಿ ಬಲಶಾಲಿ ಮತ್ತು ಆತನು ಪ್ರವಾದನ ಹುದ್ದೆಯಲ್ಲಿ ಮೋಶೆಯ ಉತ್ತರಾಧಿಕಾರಿಯಾದನು. ಆತನು ತನ್ನ ಹೆಸರು ಸೂಚಿಸುವಂತೆ, ದೇವರು ಆಯ್ದುಕೊಂಡವರ ಶ್ರೇಷ್ಠ *ರಕ್ಷಕನಾದನು,* ಅವರ ವಿರುದ್ಧವಾಗಿ ಬಂದ ವೈರಿಗಳ ಮೇಲೆ ಪ್ರತೀಕಾರ ಮಾಡಲು ಹೋದನು ಅದುದರಿಂದ ಆತನು ಇಸ್ರಾಯೇಲರಿಗೆ ಅದರ ಸ್ವಾಸ್ತ್ಯವನ್ನು ಕೊಟ್ಟನು.[19]

ಮೊದಲಿನ ಯೆಹೋಶುವನು ಸೈನಿಕದಳಕ್ಕೆ ರಕ್ಷಕನಾಗಿ ಬಂದಂತೆ ಎರಡನೆಯ ಯೆಹೋಶುವನು (ಯೇಸು) ಆತ್ಮೀಕ ರಕ್ಷಕನಾಗಿ ಬಂದನು. ಆತನು ರಾಷ್ಟ್ರಿಯ ಉದ್ದೇಶಕ್ಕಾಗಿ ಯೆಹೂದರನ್ನು ರೋಮನ್ನರ ದಬ್ಬಾಳಿಕೆಯಿಂದ ಬಿಡಿಸಲು ಬರಲಿಲ್ಲ - ಅಥವಾ ಭೂಲೋಕ ದಲ್ಲಿ ಲೋಕದ ಸಾಮ್ರಾಜ್ಯ ಸ್ಥಾಪಿಸಲು ಬರಲಿಲ್ಲ. ಅದರ ಬದಲಾಗಿ ಆತನು ಮಾನವ ಕುಲವನ್ನು ಪಾಪದಿಂದ ಮತ್ತು ಪಾಪದ ಫಲದಿಂದ ಬಿಡಿಸಲು ಬಂದನು (ನೋಡಿರಿ ರೋಮಾಪುರ 3:23, 24; 6:23). Leon Morris ಅವರು ಹೀಗೆ ವಿವರಿಸಿದ್ದಾರೆ, "ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ರಕ್ಷಿಸುವನು," "ಆತನು" (*autos*) ಎಂಬ ಸರ್ವನಾಮ ವೈಯಕ್ತಿಕವಾಗಿ "ಆತನೇ ಮತ್ತು ಬೇರೊಬ್ಬರಿಲ್ಲ"[20] ಎಂಬ ಅರ್ಥವನ್ನು ಒತ್ತಿ ಹೇಳುವುದು.

ಯೇಸು ಬರುವಾಗ, "ತನ್ನ ಸ್ವಾಸ್ಥ್ಯಕ್ಕೆ" (ಯೆಹೂದರ ಜನಾಂಗಕ್ಕಾಗಿ) ಮೊದಲು ಬಂದನು, ಎಲ್ಲಾ ಮಾನವರನ್ನು ರಕ್ಷಿಸಲು ಬಂದನು (ಯೋಹಾನ 3:16-21). ಹೆಚ್ಚಿನ ಯೆಹೂದ ಜನರು ಆತನನ್ನು ನಿರಾಕರಿಸಿದರು (ಯೋಹಾನ 1:11), ಆದರೆ ಅನ್ಯರು ಸಹ ಆತನ ರಾಜ್ಯದಲ್ಲಿ ಸ್ವಾಗತಿಸಲ್ಪಟ್ಟರು. "ಯಾರಾರು ಆತನನ್ನು ಅಂಗಿಕರಿಸಿದರೋ ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು" (ಯೋಹಾನ 1:12). ಯಾರಾರು ಆತನನ್ನು ನಂಬಿದರೊ ಅವರೆಲ್ಲರು "ದೇವರ ಮಕ್ಕಳು," ಎಂದು ಇದರ ಅರ್ಥವಲ್ಲ, ಆದರೆ ಯಾರಾರು ಆತನನ್ನು ನಂಬಿದರೊ ಅವರಿಗೆ ಮಕ್ಕಳಾಗುವ ಅಧಿಕಾರ ಕೊಡಲ್ಪಡುವದು. ಹುಟ್ಟಿದ ಜನರೆಲ್ಲಾ ಸಾಯುತ್ತಾರೆ (ಇಬ್ರಿಯ 9:27), ಆದರೆ ಯೇಸು ಮಾತ್ರ ಸಾಯುವದಕ್ಕಾಗಿ ವಿಶೇಷವಾಗಿ ಹುಟ್ಟಿದನು. ನಮ್ಮ ಪಾಪ ನಿವಾರಣೆಗಾಗಿ ಸಂಪೂರ್ಣಯಜ್ಞವಾಗಿ ಆತನು ಬಂದನು (ಇಬ್ರಿಯ 9:26-28; 10:5-10; 1 ಯೋಹಾನ 2:2; 4:10).

## ಪ್ರವಾದನೆ - ಕನ್ಯೆಯಲ್ಲಿ ಜನನ (1:22, 23)

**22ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೇರವೇರುವಂತೆ ಇದೆಲ್ಲಾ ನಡೆಯಿತು. ಆ ಮಾತು ಏನೆಂದರೆ: 23ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆಯುವಳು; ಆತನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು ಎಂಬುದು. ದೇವರು ನಮ್ಮ ಕೂಡ ಇದ್ದಾನೆಂದು ಅನುವಾದಿಸಿದ ಅರ್ಥ.**

**ವಚನ 22.** ಯೇಸು ಹಳೆ ಒಡಂಬಡಿಕೆಯ ಪ್ರವಾದನೆಗಳನ್ನು **ನೇರವೇ[ಲಿಸಿದನು]** ಎಂದು ಒತ್ತಿಹೇಳಿದ ಅನೇಕ ಮೊದಲನೆಯ ವಚನಗಳು ಈ ವಚನದಲ್ಲಿ ಒಳಗೊಂಡಿವೆ (1:22; 2:15, 17, 23; 4:14; 8:17; 12:17; 13:35; 21:4; 26:56; 27:9). ಪರ್ವತ ಪ್ರಸಂಗದಲ್ಲಿ ಯೇಸು ಉಪದೇಶಮಾಡಿ ಹೇಳಿದ್ದೇನೆಂದರೆ, "ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದುಹಾಕುವದಕ್ಕೆ ನಾನು. ಬಂದೆನೆಂದು ನೆನಸಬೇಡಿರಿ ತೆಗೆದು ಹಾಕುವದಕ್ಕೆ ಬಂದಿಲ್ಲ; ನೆರವೇಲಿಸುವದಕ್ಕೆ ಬಂದಿದ್ದೇನೆ" (5:17). ಈ ಭಾಗದಲ್ಲಿ ವಿವರಿಸಿ**ದ್ದೆಲ್ಲವೂ** ಅದ್ಭುತವಾದ ಗರ್ಭಧಾರಣೆ ಮತ್ತು ಕ್ರಿಸ್ತನು ಕನ್ಯೆಯಲ್ಲಿಯ ಜನನದ ಕುರಿತು ವಿವರಿಸಿರುವದಕ್ಕೆ ಸಂಬಂಧ ಹೊಂದಿವೆ (1:18-25), ಪ್ರವಾದಿಯ ಮುಖಾಂತರ **ದೇವರೇ** ಮಾತಾಡಿದ್ದಾನೆ, ಇತರ ಸಂದರ್ಭಗಳಲ್ಲಿ ಪ್ರವಾದಿಯನ್ನು ಹೆಸರಿಸಲಾಗಿದೆ ಮತ್ತು **ದೈವಿಕ ಪ್ರೇರಣೆಯಿಂದು** ಒಪ್ಪಲಾಗಿದೆ ಎಂದು ಮತ್ತಾಯನು ಸ್ಪಷ್ಟವಾಗಿ ಹೇಳಿದ್ದಾನೆ. ಈ ಸಂದರ್ಭದಲ್ಲಿ ಯೆಶಾಯ ಹೆಸರಿಸಲಾರದ ಪ್ರವಾದಿಯಾಗಿದ್ದಾನೆ.

**ವಚನ 23.** ಪ್ರವಾದನೆಯು ಯೆಶಾಯ 7:14ರಿಂದ ಹೇಳಲಾಗಿದೆ: **ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು.**

ಮತ್ತಾಯನು ಸೆಪ್ಟುಜೆಂಟ್‌ನ್ನು ಅನುಸರಿಸಿದ್ದಾನೆ, ಅಲ್ಲಿನ ಗ್ರೀಕ್ ಶಬ್ದ *parthenos*, ಇದರರ್ಥ "ಕನ್ಯೆ," ಇದು ಹಿಬ್ರೂನಲ್ಲಿನ *'almah*ಗೆ ಬದಲಾಗಿ ಉಪಯೋಗಿಸಲಾಗಿದೆ. ಹಳೆ ಒಡಂಬಡಿಕೆಯಲ್ಲಿ ಕೆಲವು ಕಡೆ ಇದರ್ಥ ಮದುವೆಯಾಗದ "ಕುಮಾರಿ" ಅಥವಾ "ಕನ್ಯೆ" (ನೋಡಿರಿ ಆದಿಕಾಂಡ 24:43; ಪರಮಗೀತ 1:3; 6:8). ಇತರ ಮೂರು ಸಂದರ್ಭಗಳಲ್ಲಿ ಯೌವನಸ್ಥ ಮದುವೆಯಾಗದ ಹುಡುಗಿ ಎಂದು ಹೇಳಲಾಗಿದೆ (ನೋಡಿರಿ ವಿಮೋಚನಕಾಂಡ 2:8; ಕೀರ್ತನೆ 68:25; ಜ್ಞಾನೋಕ್ತಿ 30:19). ಹಳೆ ಒಡಂಬಡಿಕೆಯಲ್ಲಿ ಮದುವೆಯಾಗಿರುವ ಸ್ತ್ರೀಗೆ ಸೂಚಿಸಲು *'almah* ಉಪಯೋಗಿಸಿಲ್ಲ ಎಂಬುದಕ್ಕೆ ಪರವಾಗಿ ಬಲವಾದ ಸಾಕ್ಷ್ಯಾಧಾರಗಳು ಇರುವವು.

ಯೆಶಾಯ 7:14ರ ಭಾಷಾಂತರ ಹೊರತುಪಡಿಸಿ, ಈ ವಚನದ ಬಗ್ಗೆ ಇನ್ನೂ ಇತರ ಪ್ರಶ್ನೆಗಳು ಉದ್ಭವಿಸಬಹುದು. ಈ ಪ್ರವಾದನೆ ಕೇವಲ ಯೇಸು ಕನ್ಯೆಯಲ್ಲಿ ಹುಟ್ಟುವದಕಷ್ಟೆ ಸಂಬಂಧ ಕಲ್ಪಿಸಿದೆಯಾ ಅಥವಾ ಎರಡು ಕಾರ್ಯಗಳ ನೇರವೇರುವಿಕೆ ಇದೆಯಾ? ಯೆಶಾಯನಲ್ಲಿರುವ ಪ್ರವಾದನೆ ಹೇಗೆ ಮೂಲ ಓದುಗರಿಂದ ವಿವರಿಸಲಾಗಿದೆ? ಮತ್ತಾಯನು ಹೇಗೆ ಈ ಪ್ರವಾದನೆಯನ್ನು ಉಪಯೋಗಿಸಿಕೊಂಡಿದ್ದಾನೆ?

ರಾಜನಾದ ರೇಚಿನ್ ಆರಾಮ್ಯರ ಅರಸನಾಗಿದ್ದವನು ಮತ್ತು ಇಸ್ರಾಯೇಲ್ಯರ ರಾಜನಾದ ಪೆಕಹನಿಗೆ (ಯೆಶಾಯ 7:1) ದಾವೀದನ ಸಂತತಿಯನ್ನು ನಾಶಮಾಡಲು ದೇವರು ಅವಕಾಶ ಕೊಡುವುದೇ ಇಲ್ಲ (ಯೆಶಾಯ 7:6) ಎಂದು ಸರಿಸುಮಾರು ಕ್ರಿ.ಪೂ. 735ರಲ್ಲಿ, ದುಷ್ಟರಾಜನಾದ ಆಹಾಜನಿಗೆ ಯೆಶಾಯನಿಂದ ಪ್ರವಾದನೆ ಹೇಳಲಾಯಿತು. ವಿಗ್ರಹರಾಧಕರಾದ ಈ ರಾಜರುಗಳು ಅವರ ಪೈಶಾಚಿಕ ರಾಜ್ಯವನ್ನು ಸ್ಥಾಪಿಸಲು ಅವರ ಸ್ವಂತ ರಾಜ್ಯಭಾರವನ್ನು ದೇವರ ಜನರ ಮೇಲೆ ನಡೆಸುವದರ ವಿಷಯದಲ್ಲಿ ದೇವರು ಮುನ್ನೆಚ್ಚರಿಕೆ ವಹಿಸಿದ್ದನು (ನೋಡಿರಿ ಆದಿಕಾಂಡ 49:10; 2 ಸಮುವೇಲ 7:12, 13). ತನ್ನ ವಾಗ್ದಾನವನ್ನು ನೆರವೇರಿ ಸಲು ಆಹಾಜನಿಗೆ ಪ್ರವಾದಿಯಾದ ಯೆಶಾಯನ ಮುಖಾಂತರ ದೇವರು ಸೂಚನೆಯನ್ನು ಕೊಟ್ಟನು:

> ಇದರಿಂದ ಕರ್ತನು ತಾನೇ ನಿಮಗೆ ಒಂದು ಗುರುತನ್ನು ಕೊಡುವನು. ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು. ಅವನು ಕೆಟ್ಟದ್ದು ಬೇಡ, ಒಳ್ಳೆದು ಬೇಕು ಅನ್ನುವಷ್ಟು ಬಲ್ಲವನಾಗುವಾಗ ಮೊಸರನ್ನೂ ಜೇನುತುಪ್ಪವನ್ನು ತಿನ್ನುವನು. *ಆ ಮಗುವು ಕೆಟ್ಟದ್ದು ಬೇಡ ಒಳ್ಳೆದು ಬೇಕು ಅನ್ನುವಷ್ಟು ಬಲ್ಲವನಾಗುವದರೊಳಗೆ ಯಾವ ಇಬ್ಬರು ರಾಜರಿಗೆ ನೀನು ಹೆದರಿ ನಡುಗುತ್ತಿಯೋ ಅವರ ದೇಶವು ನಿರ್ಜನವಾಗುವದು* (ಯೆಶಾಯ 7:14-16; ಒತ್ತಿ ಹೇಳಿದ್ದು ನನ್ನದು).

ಆಹಾಜನಿಗೆ ಗುರುತನ್ನು ತಿಳಿಸಲಾಗುವಂತೆ, ಈ ಪ್ರವಾದನೆಯಲ್ಲಿ ಪ್ರಾರಂಭದಲ್ಲಿ ಮಾತಾಡಿದ ಮಗನು ಸ್ವಲ್ಪ ಕಾಲ ಸಮಯ ಆಳ್ವಿಕೆ ಇರುವಾಗ ಹುಟ್ಟಿರಬಹುದು. ಕೆಲವು ವರ್ಷಗಳ ನಂತರ, ಅಶ್ಶೂರರು ಇಸ್ರಾಯೇಲ್ಯರ ವಿರುದ್ಧ (ಕ್ರಿ.ಪೂ. 733) ಮತ್ತು ಅರಾಮ್ಯರ ವಿರುದ್ಧ (ಕಿ.ಪೂ. 732) ವಾಗಿ ಬಂದರು ಮತ್ತು ಅನೇಕ ನಿವಾಸಿಗಳು ಗಡಿಪಾರು ಮಾಡಲಾಯಿತು; ಪೆಕಹ ಮತ್ತು ರೇಚಿನ್ ಕೊಲ್ಲಲ್ಪಟ್ಟರು (2 ಅರಸುಗಳು 15:29, 30; 16:9). ಕ್ರಿ.ಪೂ. 722ರಲ್ಲಿ ಅಶ್ಶೂರರಿಂದ ಇಸ್ರಾಯೇಲ್ಯರಿಗೆ ಅಂತ್ಯದಲ್ಲಿ ನಷ್ಟವಾಯಿತು. ಕರ್ತನು ವಾಗ್ದಾನ ಮಾಡಿದಂತೆಯೇ ಅಶ್ಶೂರರು ಇಸ್ರಾಯೇಲ್ಯರ ಮತ್ತು ಆರಾಮ್ಯರಿಗೆ ವಿರುದ್ಧವಾಗಿ ಬರುವದಕ್ಕೆ ಮುಂಚಿತವಾಗಿ ಈ ಮಗನ ಜನನವು ಆಯಿತು.

ಈ ಹುಟ್ಟಲಿಕ್ಕಿರುವ ಮಗುವಿನ ಕಾಲವ್ಯವಧಿ ಸೂಚಿಸುವ ಸಂಕೇತವನ್ನು ಆಹಾಜನಿಗೆ ಕೊಡಲಾಗಿದೆ. ಮಗು, ಹುಟ್ಟುವದಕ್ಕೆ ಮತ್ತು ಒಳ್ಳೆಯದು ಕೆಟ್ಟದ್ದು ತಿಳಿದುಕೊಳ್ಳುವದಕ್ಕೆ

ಬೇಕಾಗಿರುವ ಸಮಯವು, ಪ್ರಶ್ನಾರ್ಥಕವಾಗಿ ಇರುವ ಇಬ್ಬರು ರಾಜರುಗಳು ದೃಶ್ಯದಿಂದ ದಾಟಿಹೋದ ನಂತರ ದಾಟಿಹೋಗುವ ಕಾಲವಾಗಿರಬಹುದು. ಪ್ರವಾದನೆಯ ಭಾಗವಾಗಿರುವ ಕನ್ಯೆಯಲ್ಲಿ ಜನನದ ಕುರಿತು ಆಹಾಜನು ಅರ್ಥಮಾಡಿಕೊಳ್ಳಲಾಗಲಿಲ್ಲ; ಅವನು ಕೇವಲ ಸಮಯದ ಗುರುತನ್ನು ನೋಡಿರಬಹುದು. ಈ ಇಬ್ಬರು ಅರಸರು ದಾಟಿಹೋಗುವದರಿಂದ, ಆಹಾಜನು Tiglath-pileser ನೊಂದಿಗೆ ಯಾವುದೇ ಹತ್ತಿರದ ಸಂಬಂಧವಿಟ್ಟುಕೊಳ್ಳಬಾರದೆಂದು ಯೆಶಾಯನು ಎಚ್ಚರಿಸಿದನು.

ಕನ್ಯೆಯಲ್ಲಿ ಯೇಸುವಿನ ಜನನದ ಮುಖಾಂತರ ಈ ಪ್ರವಾದನೆಯು ನೇರವೇರಿತು ಎಂದು ಮತ್ತಾಯನು ಹೇಳಿದ್ದಾನೆ (1:23). ಆತನ ದೃಢಪಡಿಸುವಿಕೆಯು ಪ್ರವಾದನೆಯ ಎರಡು ಸ್ವರೂಪವನ್ನು ತೋರಿಸುತ್ತದೆ. *ಆ ದಿನಕ್ಕಾಗಿ* ಆಹಾಜನಿಗೆ ಒಂದು ಅನ್ವಹಿಸುವಿಕೆ ಇತ್ತು - ಅಶ್ಶೂರರಿಂದ ಪರಿಹಾರ ಬರುತ್ತಾ ಇತ್ತು; ಮತ್ತು ಇದು ಸಹ ಇನ್ನೊಂದು ದಿನಕ್ಕಾಗಿ ಒಂದು ಅನ್ವಹಿಸುವಿಕೆ ಇತ್ತು - ಅದು ಕನ್ಯೆಯಲ್ಲಿ ಕ್ರಿಸ್ತನ ಜನನವು. ಕನ್ಯೆ ಗರ್ಭದಲ್ಲಿ ಜನನ ಕುರಿತ ಪ್ರವಾದನೆ ಭಾಗವು ಕ್ರಿಸ್ತನ ಜನನೊಂದಿಗೆ ನೆರವೇರಿಸಲ್ಪಟ್ಟಿದೆ. ಆಹಾಜನು ಇದನ್ನು ಅರ್ಥಮಾಡಿಕೊಂಡಿಲ್ಲ. ಆದರೆ ಮತ್ತಾಯನು ನಮಗೋಸ್ಕರ ಇಷ್ಟು ಸ್ಪಷ್ಟವಾಗಿ ಹೇಳದಿದ್ದರೆ ಬಹುಶಃ ನಮಗೂ ಅರ್ಥವಾಗಿರುವದಿಲ್ಲ.

ದಾವೀದ ಕುಮಾರನಾದ, ಯೇಸು ಮೆಸ್ಸೀಯನಾಗಿ ಬಂದನೆಂದು ಮತ್ತಾಯನು ಯೆಶಾಯ 7:14ರಲ್ಲಿರುವ ಪ್ರವಾದನೆಯು ನೆರವೇರಿಸಲ್ಪಟ್ಟಿದೆ ಎಂದು ಉಲ್ಲೇಖಿಸಿ ತೋರಿಸಿದ್ದಾನೆ. ವಂಶ ಪರಂಪರೆಗೆ ಸಂಬಂಧಿಸಿ ದಾವೀದನಿಗೆ ಕೊಟ್ಟ ವಾಗ್ದಾನಗಳನ್ನು ನೆರವೇರಿಸಲು, ಶಾಶ್ವತವಾಗಿ ನೆರವೇರಿಸಲು ಬಂದನು (2 ಸಮುವೇಲ 7:12, 13). ಇದಕ್ಕೆ ಸೇರಿಸಿ, ಮರಿಳಯಳು ಇನ್ನೂ ಕನ್ಯೆಯಾಗಿರುವಾಗ ಯೇಸು ಅದ್ಭುತವಾಗಿ ಆಕೆಯಲ್ಲಿ ಗರ್ಭಧರಿಸಿ ಜನ್ಮಿಸಿದನು. ದೇವರು ಒಬ್ಬಳೆ ನಂಬಿಗಸ್ತಳಾದ ಕನ್ಯೆಯನ್ನು ಉಪಯೋಗಿಸಿಕೊಂಡನು, ಮರಿಯಳ ಮುಖಾಂತರ ಯೇಸು ಜನ್ಮಿಸಿದನು.[21]

"ಇಮ್ಮಾನುವೇಲ" **ಎನ್ನುವ ಹೆಸರಿನ ಅರ್ಥ "ದೇವರು ನಮ್ಮ ಸಂಗಡ"** ಇದ್ದಾನೆಂಬುವದು, ಅಂತಿಮವಾಗಿ ಯೇಸುವಿನ ಅವತಾರ ಹೊಂದುವದರ ಮುಖಾಂತರ ನೆರವೇರಿದೆ (ನೋಡಿರಿ ಯೆಶಾಯ 9:6, 7). "ದೇವರು ನಮ್ಮ ಸಂಗಡ" ಎನ್ನುವದು ದೇವರ ಕಾರ್ಯ ಮತ್ತು ಪ್ರಸನ್ನತೆ ಆತನ ಜನರ ಜೀವನದಲ್ಲಿ ಇರುತ್ತದೆಂಬುದಾಗಿ ಹಳೆ ಒಡಂಬಡಿಕೆಯಲ್ಲಿ ವಿವರಿಸಲಾಗಿದೆ. ಹೊಸಒಡಂಬಡಿಕೆಯಲ್ಲಿ, ಇದು ಆತನ ಜನರ ಮಧ್ಯದಲ್ಲಿ ದೇವರ ಸಜೀವ ಪ್ರಸ್ನತೆಯು ಇರುತ್ತದೆ ಎಂದು ಸೂಚಿಸುತ್ತದೆ. "ವಾಕ್ಯವು" "ದೇವರೊಂದಿಗೆ" ಮಾತ್ರ ಇರಲಿಲ್ಲ ಆದರೆ ಆತನು "ದೇವರಾಗಿದ್ದನು" (ಯೋಹಾನ 1:1). "ಮತ್ತು ವಾಕ್ಯವೆಂಬುವನು ನರಾವತಾರ ಎತ್ತಿದನು ಮತ್ತು ನಮ್ಮ ಮಧ್ಯದಲ್ಲಿ ವಾಸಮಾಡಿದನು" (ಯೋಹಾನ 1:14). Mounce ರವರು ಗಮನಿಸಿ ಹೀಗೆ ಹೇಳಿದ್ದಾರೆ, "[ಮತ್ತಾಯನ] ಸುವಾರ್ತೆಯು - 'ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ' ಎಂಬ 'ಇಮ್ಮಾನುವೇಲ್' ವಾಗ್ದಾನದೊಂದಿಗೆ ಮುಕ್ತಾಯವಾಗಿರುವದು ಯುಕ್ತವಾಗಿದೆ (ಮತ್ತಾಯ 28:20)."[22]

## ಕಾಯುತ್ತಿರುವ ಕಾಲಾವಧಿ – ವಿಶ್ವಾಸದ ಸಮಯ (1:24, 25)

**24ಆಗ ಯೋಸೇಫನು ನಿದ್ದೆ ತಿಳಿದದ್ದು ಕರ್ತನ ದೂತನು ಅಪ್ಪಣೆಕೊಟ್ಟ ಹಾಗೆ ತನ್ನ ಹೆಂಡತಿಯನ್ನು ಸೇರಿಸಿಕೊಂಡನು. 25ಆದರೆ ಆಕೆಯು ಗಂಡುಮಗನನ್ನು ಹಡೆಯುವ ತನಕ ಆಕೆಯನ್ನು ಅರಿಯಲಿಲ್ಲ. ಮಗುವಿಗೆ ಯೇಸುವೆಂದು ಹೆಸರಿಟ್ಟನು.**

**ವಚನ 24.** ಆಗ ಯೋಸೇಫನು ನಿದ್ದೆಯಿಂದ ಎದ್ದು, ಕರ್ತನ ದೂತನು ಆತನಿಗೆ ತಿಳಿಸಿದ ಸತ್ಯ ವಿಷಯವನ್ನು ಒಪ್ಪಿ ಮತ್ತು ಅಪ್ಪಣೆಕೊಟ್ಟಂತೆ **ಮರಿಯಳನ್ನು ತನ್ನ ಹೆಂಡತಿ**ಯನ್ನಾಗಿ

ಸೇರಿಸಿಕೊಂಡನು. ಯೋಸೇಫನು "ದೇವರ ಚಿತ್ತಕ್ಕೆ ವಿಧೇಯನಾಗುವಂತೆ, ಯೆಹೂದ್ಯರ ಶ್ರೇಷ್ಟ ತಂದೆಯಾಗಿರಲು ಒಂದು ದೊಡ್ಡ ಹಕ್ಕೆಂದು ಗ್ರಹಿಸಿದ್ದನ್ನು - ಮೊದಲ ಮಗನಿಗೆ ತಂದೆ ಎನಿಸಿಕೊಳ್ಳುವದು - ಬಿಟ್ಟುಬಿಡಬೇಕೆಂದು ಇಚ್ಚೆಯಿಸಿದನು."[23]

ಮರಿಯಳು ಗರ್ಭಹೊಂದಿರುವದನ್ನು ಎಲಿಜಬೇತ್‌ಳೊಂದಿಗೆ ಎಷ್ಟು ಜನರು ತಿಳಿದಿದ್ದರೊ (ಮತ್ತು ನಾವು ಊಹಿಸಿಕೊಳ್ಳಬಹುದು ಆಕೆಯ ಗಂಡ ಜಕರಿಯಾ) ಎಂಬುದಾಗಿ ನಮಗೆ ಗೊತ್ತಿಲ್ಲ. ನೀನು ಕನ್ಯೆಯಾಗಿದ್ದರೂ ಮಗುವಿಗೆ ಜನ್ಮ ಕೊಡುತ್ತಿ ಎಂದು ಗಬ್ರಿಯೇಲ್ ದೂತನು ಮರಿಯಳಿಗೆ ಹೇಳಿದ ಸಮಯದಲ್ಲೇ. ಆಕೆಯ "ಸಂಬಂಧಿಯಾದ" ಎಲಿಸಬೇತಳು ಮಗನಾದ ಯೋಹಾನನು ಗರ್ಭಧರಿಸಿ ಆರನೆಯ ತಿಂಗಳೆಂದು ಪ್ರಕಟಿಸಿದಳು (ಲೂಕ 1:36). ಈ ಭಾಗವು ಹೀಗೆ ಹೇಳುತ್ತದೆ, ಮರಿಯಳು ಪವಿತ್ರಾತ್ಮನಿಂದ ಗರ್ಭಿಣಿಯಾದಳು, ಇದು ದೇವದೂತನು ಹೇಳಿದ ನಂತರವೇ ಆಯ್ತು ಮತ್ತು ಆಕೆಯು "ಅದೇ ಸಮಯದಲ್ಲಿ" (ಲೂಕ 1:39) ಎಲಿಜಬೇತಳನ್ನು ಭೇಟಿಮಾಡಲು ಹೋದಳು. ಆಕೆಯ ಚಿಕ್ಕಪ್ಪನ ಮಗನು ಮರಿಯಳು ಗರ್ಭವತಿಯಾಗಿರುವದು ತಿಳಿದುಕೊಂಡನು (ಲೂಕ 1:42, 43). ಮರಿಯಳು ಎಲಿಜಬೇತಳೊಂದಿಗೆ "ಸುಮಾರು ಮೂರು ತಿಂಗಳು" ಇದ್ದಳು (ಲೂಕ 1:56). ಇದರ ಅರ್ಥವೇನೆಂದರೆ ಮರಿಯಳು ಮನೆಗೆ ಹಿಂತಿರುಗುವ ಹೊತ್ತಿಗೆ ಆಕೆಯ ಗರ್ಭವು ಕಾಣಿಸಲು ಪ್ರಾರಂಭವಾಗಿರಬಹುದು. ಇದೆಲ್ಲವು ತಿಳಿದುಕೊಂಡ ಯೋಸೇಫನು ಕನಸಿನಲ್ಲಿ ದೇವದೂತನು ದರ್ಶಿಸಿದ ನಂತರ ತಕ್ಷಣವೇ ಆಕೆಯನು ತನ್ನ ಹೆಂಡತಿಯಾಗಿ ಸೇರಿಸಿಕೊಂಡನು, ಇನ್ನೂ ಕೆಲವರಿಗೆ ಆಕೆಯ ಈ ಸ್ಥಿತಿಯು ಗೊತ್ತಿರಬಹುದು.[24]

**ವಚನ 25. ಆದರೆ** [ಯೋಸೇಫನು] **ಆಕೆಯು ಮಗುವಿಗೆ ಜನ್ಮಕೊಡುವವರೆಗೆ ಕನ್ಯೆಯಾಗಿಯೆ ಇದ್ದಳು.** ಆಕೆಯು ಕನ್ಯೆಯಾಗಿದ್ದು ಮತ್ತು ಜನನ ಕೊಡುವದನ್ನು ಈ ಹೇಳಿಕೆಯು ವಾಸ್ತವವೆಂದು ಕೆಳಗಡೆ ಗೆರೆ ಎಳೆಯುವಷ್ಟು ಪ್ರಾಮುಖ್ಯವಾಗಿದೆ. "[ಆತನೆ] ಆಕೆಯನ್ನು ಕನ್ಯೆಯಾಗಿ ಇಟ್ಟನು" ಎನ್ನುವ ಬದಲಾಗಿ ಗ್ರೀಕ್ ಪಠ್ಯದಲ್ಲಿ ಅಕ್ಷರಶಃ ಹೀಗೆ ಹೇಳಿದೆ. "ಆತನು ಆಕೆಯನ್ನು ಅರಿಯಲಿಲ್ಲ" (ನೋಡಿರಿ NKJV). "ಅರಿ" "know," *ginōskō*, ಎಂದು ಅನುವಾದಿಸಲಾಗಿರುವ ಗ್ರೀಕ್ ಶಬ್ದವು, ಅದಕ್ಕೆ ಸರಿಸಮಾನವಾಗಿರುವ ಹಿಬ್ರೂ ಭಾಷೆಯಲ್ಲಿಯ *yada'* ರೊಂದಿಗೆ ಸೇರಿಸಿ ಲೈಂಗಿಕ ಸಂಬಂಧದ ಮೃದು ಭಾಷಿಕ ಶಬ್ದವಾಗಿ ಉಪಯೋಗಿಸಲಾಗಿದೆ (ನೋಡಿರಿ ಆದಿಕಾಂಡ 4:1, 17, 25; ಲೂಕ 1:34; KJV). ಕೆಲವು ಗ್ರೀಕ್ ಬರಹಗಾರರ ಹಸ್ತಲೇಖನದಲ್ಲಿ "ಮಗ" ಎಂಬುದನ್ನು ಬದಲಾಯಿಸಿ "ಚೊಚ್ಚಲ ಮಗ" ಎಂಬ ಗುಣವಾಚಕವನ್ನು (ನೋಡಿರಿ KJV) ಉಪಯೋಗಿ ಸಿದ್ದಾರೆ, ಬಹುಶಃ ಲೂಕ 2:7ರಿಂದ ತೆಗೆದುಕೊಂಡಿರಬಹುದು: "ಆಕೆಯು ತನ್ನ ಚೊಚ್ಚಲ ಮಗನನ್ನು ಹೆತ್ತಳು ..."

ಪರಿಶುದ್ಧತೆಯ ಪರಿಕಲ್ಪನೆಯ ಸಿದ್ಧಾಂತವು ಮೇಲ್ನೋಟಕ್ಕೆ ತಪ್ಪಾದ ದಾರಿಗೆ ನಡಿಸುತ್ತಿದೆ. ಈ ವಿಷಯವು ಯೇಸು ಕ್ರಿಸ್ತನನ್ನು ಎಲ್ಲಿಯೂ ಸೂಚಿಸಿಲ್ಲ; ಇದು ಮರಿಯಳನ್ನು ಸೂಚಿಸುತ್ತದೆ.[25] ಇದರಲ್ಲಿರುವ ಆಲೋಚನೆ ಏನೆಂದರೆ ಆಕೆಯು ದೈವಿಕವಾಗಿದ್ದಾಳೆ ಮತ್ತು ಆರಾಧನೆಗೆ ಅರ್ಹಳಾಗಿದ್ದಾಳೆ. ಸತ್ಯವೇದವು ಈ ಸಿದ್ಧಾಂತವನ್ನು ಕಲಿಸುವುದಿಲ್ಲ, ವಾಸ್ತವವಾಗಿ, ಆಕೆಯ ಮಾನವಿಯತೆಯನ್ನು ನಮ್ಮ ಮೇಲೆ ಆಳವಾದ ಪರಿಣಾಮವನ್ನುಂಟು ಮಾಡುತ್ತದೆ (12:46-50; 13:55; ಲೂಕ 2:48-51; ಯೋಹಾನ 2:3, 4; 19:25-27). ಪರಿಶುದ್ಧತೆಯ ಪರಿಕಲ್ಪನೆಯು ಮರಿಯಳ ಶಾಶ್ವತವಾದ ಕನ್ಯತ್ವದ ಇನ್ನೊಂದು ಸಿದ್ಧಾಂತಕ್ಕೆ ಸಂಪರ್ಕ ಒದಗಿಸುತ್ತದೆ. ಹಾಗಿದ್ದರೂ, ಆಕೆ ಮತ್ತು ಯೋಸೇಫನು ಲೈಂಗಿಕ ಸಂಪರ್ಕದಿಂದ ಮಗು ಆಗುವವರೆಗೆ ದೂರವಿದ್ದರು (1:25), ಅಥವಾ ಕ್ರಿಸ್ತನ ಜನನದ ನಂತರ ಸಾಮಾನ್ಯ ಲೈಂಗಿಕ ಸಂಬಂಧವು ಪ್ರಾರಂಭವಾಯಿತು ಎಂದು ಈ ವಾಕ್ಯಭಾಗವು ಸೂಚಿಸುತ್ತದೆಂದು ಮತ್ತಾಯನ ಹೇಳಿಕೆಯ ಅರ್ಥವಾಗಿದೆ. ಮರಿಯಳಿಗೆ ಇತರ ಮಕ್ಕಳಿದ್ದರು ಎಂದು ಸ್ಪಷ್ಟವಾಗಿದೆ, ಮತ್ತು

ಆಕೆಯು ಆತನೊಂದಿಗೆ ಸಾಮಾನ್ಯವಾದ ರೀತಿಯಲ್ಲಿ ಗರ್ಭವತಿಯಾಗಿ ಮಕ್ಕಳನ್ನು ಪಡೆದಳೆನ್ನುವದು ನಿಸ್ಸಂಶಯವಾದದ್ದು (12:46; 13:55, 56).

ಮರಿಯಳೊಂದಿಗೆ ಲೈಂಗಿಕ ಸಂಪರ್ಕದಿಂದ ಯೋಸೇಫನು ಯೇಸು ಹುಟ್ಟುವವರೆಗೆ ದೂರವಿದ್ದನು, ಮರಿಯಳಲ್ಲಿ ಹುಟ್ಟುವ ಮಗನು ದೇವಕುಮಾರನು ಎಂದು ದೇವರು ತನಗೆ ಪ್ರಕಟಿಸಿರುವ ಸತ್ಯವನ್ನು ಯೋಸೇಫನು ತನ್ನ ಸ್ವಂತ ವಿಶ್ವಾಸದಿಂದ ತೋರಿಸಿಕೊಟ್ಟನು. ಮರಿಯಳು ಅನೈತಿಕ ಸ್ತ್ರೀ, ಮತ್ತು ಯೇಸು ಹಾದರ ಸಂಬಂಧದಿಂದ ಹುಟ್ಟಿದ ಸಂತಾನವೆಂದು ಹೇಳಿ ದೇವದೂಷಣೆ ಮಾಡುವವರ ಬಾಯಿಯನ್ನು ಈ ಕಾರ್ಯವು ಎಂದೆಂದಿಗೂ ಶಾಶ್ವತವಾಗಿ ಮುಚ್ಚಿಬಿಟ್ಟಿತು.

ದೇವದೂತರ ಮಾರ್ಗ ದರ್ಶನದಂತೆ ಯೋಸೇಫನು ಮರಿಯಳನ್ನು ಕೇವಲ ಹೆಂಡತಿಯಾಗಿ ತೆಗೆದುಕೊಳ್ಳುವದು ಮಾತ್ರವಲ್ಲದೆ **ಮಗುವಿಗೆ ಯೇಸುವೆಂದು ಹೆಸರಿಟ್ಟನು** (1:21). ಯಾವಾಗ ಇದನ್ನು ಮಾಡಿದನೋ, ಯೇಸುವಿಗೆ ನ್ಯಾಯವಾದ ರೀತಿಯಲ್ಲಿ "ಯೋಸೇಫನ ಮಗ" ಎನ್ನುವ ಸ್ಥಾನವನ್ನು ಕೊಟ್ಟನು (1:16; 13:55; ಯೋಹಾನ 6:42). ಆ ಮಗುವಿಗೆ ನಾಮಕರಣವು ಎಂಟನೆಯ ದಿನದಂದು ಆಯ್ತು, ಆ ಸಮಯದಲ್ಲಿ ಯೇಸುವಿಗೆ ಸುನ್ನತಿ ಮಾಡಿಸಿದರು (ಲೂಕ 2:21). "ಯೇಸು" ಎನ್ನುವ ಹೆಸರು ಈ ಭಾಗದ ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿಯೂ ಕಾಣಿಸುತ್ತದೆ (1:18, 25).

## ಪಾಠಗಳು

## ಬೇಕಾಗಿರದ ಮಗು (1:18-25)

ಅನೇಕ ವರ್ಷಗಳ ಹಿಂದೆ, ಒಂದು ಚಿಕ್ಕ ಹಳ್ಳಿಯಲ್ಲಿ, ಒಂದು ಮಗು ಹುಟ್ಟಿತು. ವಿವಾಹ ಬಂಧನಕ್ಕೆ ಒಳಗಾಗದೆ ಇರುವ ತಾಯಿಗೆ ಈ ಮಗು ಹುಟ್ಟಿತು. ಆಕೆಯ ಸಂಪ್ರದಾಯದಲ್ಲಿ ಇಂತವರಿಗೆ ಮರಣದಂಡನೆ ವಿಧಿಸುತ್ತಿದ್ದರು. ಆಕೆಯನ್ನು ನಿಶ್ಚಿಯ ಮಾಡಿಕೊಂಡವನು, ಆಕೆಯ ಈ ಕೆಟ್ಟ ಸಮಯದಲ್ಲಿ ಆಕೆಯನ್ನು ಪ್ರೀತಿಸಿ, ತನ್ನ ಯೋಜನೆ ಪ್ರಕಾರವಾಗಿ ಮುಂದೆ ಹೋದನು ಮತ್ತು ಆಕೆಯನ್ನು ಮದುವೆ ಮಾಡಿಕೊಂಡನು. ಇಂದು ಆ ಯೌವನಸ್ಥ ಸ್ತ್ರೀಗೆ ಕೆಲವರು ಹೀಗೆ ಸಲಹೆ ಕೊಟ್ಟಿರಬಹುದು, ನಾಚಿಕೆಪಡುವ ಕಾರ್ಯದಲ್ಲಿ ಮುಂದೆ ಹೋಗಬೇಡ ಮತ್ತು ಯೋಜನೆ ಇಲ್ಲದ ಗರ್ಭವು ನಿನಗೆ ತೊಂದರೆ ಉಂಟುಮಾಡುತ್ತದೆ. ಅವರು ಆಕೆಯನ್ನು ಗುಟ್ಟಾಗಿ ಇರುವಂತೆ ಹೇಳಿರಬಹುದು, ಆ ಮಗುವಿನ ತಂದೆಯಿಂದಲೂ ದೂರವಿರುವಂತೆ ಹೇಳಿರಬಹುದು, ಮತ್ತು ಗರ್ಭಪಾತ ಮಾಡಿಸುವಂತ ಪ್ರೋತ್ಸಾಹ ಮಾಡಿರಬಹುದು. ಯಾರಿಗೂ ಎಂದಿಗೂ ಗೊತ್ತಿಲ್ಲ. ಈ ಕಥೆಯಲ್ಲಿರುವ ಯೌವನಸ್ಥ ಸ್ತ್ರೀಯರೆಂದು ನೀವು ಊಹಿಸಿಕೊಳ್ಳಲು ಆಗಿರುವುದಿಲ್ಲವೇ, ಈಗಾಗಲೇ ಕಥೆಯಲ್ಲಿವರುವವಳೆ ಮರಿಯಳು, ಯೇಸುವಿನ ತಾಯಿ.

ಗರ್ಭಪಾತ ಬಹಳ ಸಮಯದಿಂದ ಇದೆ. ಇದು ಆ ಮರಿಯಳಿಗೆ ದೊರಕುವ ಅವಕಾಶವಿತ್ತು. ಆಕೆಯು ತನ್ನ ಮಗುವನ್ನು ಗರ್ಭಪಾತ ಮಾಡಿಸಲು ಆಯ್ದುಕೊಂಡಿದ್ದರೆ? ಯೇಸು ಹುಟ್ಟದೆ ಇದ್ದಿದ್ದರೆ? ಆತನು ಮರಿಯಳ ಗರ್ಭದಲ್ಲಿ ದೇವರ ಕುಮಾರನಿಗಿಂತ ಮತ್ತು ಲೋಕ ರಕ್ಷಕನಿಗಿಂತ ಕಡಿಮೆಯಾಗಿದ್ದನೋ? ಮರಿಯಳಿಗೆ ಈ ಯೇಸು ಯಾರೆಂದು ಗೊತ್ತಿತ್ತು (ನೋಡಿರಿ 1:20-23; ಲೂಕ 1:26-38), ಮತ್ತು ಆಕೆಯು ತನ್ನ ಮಗುವನ್ನು ಗರ್ಭಪಾತ ಮಾಡಿಸುತ್ತಿರಲಿಲ್ಲ; ಆದರೆ ಒಂದು ವೇಳೆ ಮಾಡಿಸಿಕೊಂಡಿದ್ದರೆ ಲೋಕದ ಸ್ಥಿತಿಯು ನಿರಾಶೆಯಿಂದ ಇದ್ದ ಹಾಗೆಯೇ ಇರುತ್ತಿತ್ತು. ಆತನಿಲ್ಲದೆ ನಿರೀಕ್ಷೆಯಿಲ್ಲದೆ ಮತ್ತು ಅಸಾಯಕತೆಯಿಂದ ಇರುತ್ತಿತ್ತು. ಪ್ರತಿದಿನವು ಸಾವಿರಾರು ಅಮಾಯಕ ಮಾನವ ಜೀವಗಳು ನಿರ್ಮೂಲವಾಗುತಿತ್ತು. ಇದರಲ್ಲಿ ಎಷ್ಟು ಮಕ್ಕಳು ಬೆಳದು ಈ ಲೋಕವನ್ನು ಆಶಿರ್ವದಿಸುವವ ರಾಗಿರಬಹುದು ಆದರೆ ಅವರಿಗೆ ಅವಕಾಶವೇ ಇಲ್ಲ?

ಬೇಕಾಗಿರದ ಮಕ್ಕಳು ಹೊಸ ಅಸಾಧಾರಣ ವ್ಯಕ್ತಿಗಳಲ್ಲ. ಯೇಸು ಹುಟ್ಟಿದಾಗ, ಆತನ ತಂದೆ ತಾಯಿಗಳು ಮತ್ತು ಬಹುಶಃ ಇತರರನ್ನು ಹೊರತುಪಡಿಸಿ, ಆತನು ಬೇಕಾಗಿರಲಿಲ್ಲ.

*ಆತನು ಅರಸನಾದ ಹೆರೋದನಿಗೆ ಬೇಕಾಗಿರಲಿಲ್ಲ.* ಹೆರೋದನು ತನ್ನ ಸಿಂಹಾಸನವನ್ನು ಯಾರೋ ಕಸಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ಭಯಪಟ್ಟನು. ಈ ಹುಚ್ಚ ಆಡಳಿತಗಾರನು, "ಯೆಹೂದ್ಯರ ಅರಸನಾಗಿ ಹುಟ್ಟಿದವನೆಂದು ತಿಳದುಕೊಂಡ ಮೇಲೆ" ಸಿಟ್ಟಿನಿಂದ ಕೋಪೊದ್ರಕದಿಂದ ತುಂಬಿದ್ದನು ಮತ್ತು ಕೊಲೆಗಾರನಂತೆ ಆವೇಶಹೊಂದಿದನು, ಆ ಮಗುವನ್ನು ಕೊಲ್ಲುವದಕ್ಕಾಗಿ ಯತ್ನಿಸಿದನು (2:7-18).

*ಆತನು ಬೆಳೆದಂತೆ ಯೇಸುವಿನ ಕುಟುಂಬದಲ್ಲಿ ಅನೇಕರು* ಆತನ ಪ್ರಾರಂಭದ ಸೇವೆ ದಿನಗಳಲ್ಲಿ ಆತನನ್ನು ನಿರಾಕರಿಸಿದರು (ಯೋಹಾನ 7:5). ಆತನ ಸಹೋದರರಲ್ಲಿ ಯಾರು ಸಹ ಆತನ ಪುನರುತ್ಥಾನದ ನಂತರದವರೆಗೆ ನಂಬಲಿಲ್ಲ (ಯೋಹಾನ 7:5; ಅಪೊಸ್ತಲರ ಕೃತ್ಯಗಳು 1:14; 1 ಕೊರಿಂಥದವರಿಗೆ 15:7).

*ಸ್ಥಾಪಿಸಲ್ಪಟ್ಟ ಯೆಹೂದ್ಯ ಮತಧರ್ಮಕ್ಕೆ ಆತನು ಬೇಕಾಗಿರಲಿಲ್ಲ.* ಯೋಹಾನನು ಬರೆಯುತ್ತಾನೆ, "ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು ಆದರೆ ಸ್ವಂತ ಜನರು ಆತನನ್ನು ಅಂಗೀಕರಿಸಲಿಲ್ಲ" (ಯೋಹಾನ 1:11; ನೋಡಿರಿ ಯೆಶಾಯ 53:3-9).

ಮಾನವನ ಜೀವಿತ ದೇವರ ವರವೆಂದು ಪ್ರೀತಿಸಬೇಕು. ನಮ್ಮ ಮಕ್ಕಳು ಗರ್ಭದಲ್ಲಿರುವಾಗ ಮತ್ತು ಹೊರಗಡೆ ಇರುವಾಗಲು ಅವರನ್ನು ನೋಡಿಕೊಳ್ಳುವದರಲ್ಲಿ ಇದು ಕಾಣಿಸಬೇಕು. ನಾವು ಗರ್ಭಪಾತದ ವಿರುದ್ಧವಾಗಿ ದೃಢವಾದ ನಿಲುವನ್ನು ತೆಗೆದಕೊಳ್ಳಬೇಕು - ಮುಗ್ಧರ ಮತ್ತು ಇನ್ನು ಜನಿಸಿರದ ಮಕ್ಕಳ ನಾಶನ. ಇದಕ್ಕೆ ಇನ್ನು ಕೆಲವು ವಿಷಯಗಳು ಸೇರಿಸಿ, ಅಲಕ್ಷತನಕ್ಕೆ ಒಳಗಾಗಿರುವ ಮತ್ತು ದುರುಪಯೋಗವಾಗುವ ಮಕ್ಕಳ ಕಡೆಗೆ ನಾವು ಕರುಣೆ ತೋರಿಸಬೇಕು.

## ಕನ್ಯೆಯಲ್ಲಿ ಜನನ (1:18-25)

ಅದ್ಭುತವಾದ ಗರ್ಭಧಾರಣೆ ಮತ್ತು ಕನ್ಯೆಯಲ್ಲಿ ಯೇಸುವಿನ ಜನನವು ಕ್ರೈಸ್ತ ನಂಬಿಕೆಯಲ್ಲಿ ಮುಖ್ಯವಾದ ಸ್ಥಂಭಗಳಾಗಿವೆ. ಈ ಘಟನೆಗಳಿಗೆ ಸಂಬಂಧಿಸಿದಂತೆ ಮುಖ್ಯವಾದ ಐದು ಅಂಶಗಳನ್ನು ನೋಡಿಕೊಳ್ಳೋಣ (ಅವೆಲ್ಲವುಗಳು "ಕನ್ಯೆಯಲ್ಲಿ ಜನನ"ದ ಕುರಿತು ಹೇಳುತ್ತವೆ).

*ಕನ್ಯೆಯಲ್ಲಿ ಜನನ ದೈವಿಕ ಕಾರ್ಯವಾಗಿದೆ.* ಈ ಲೋಕಕ್ಕೆ ಯೇಸು ಬರುವದು ದೇವರ ಕೃಪೆ ಮತ್ತು ಶಕ್ತಿಯಿಂದಲು ಆಗಿದೆ (ಯೋಹಾನ 3:16; ಎಫೆಸ 2:8-10). ಮನುಷ್ಯನು ತನ್ನನ್ನು ತಾನು ರಕ್ಷಿಸಿಕೊಳ್ಳಲು ಆಗುವದಿಲ್ಲ. ದಂಪತಿಗಳು ಮಕ್ಕಳನ್ನು ಪಡೆಯುವ ಆಸೆಯಿಂದ ಅಥವಾ ಸ್ವಾಭಾವಿಕವಾಗಿ ಮಾನವ ಜನ್ಮಕೊಡುವದರಿಂದ ಯೇಸು ಕ್ರಿಸ್ತನ ಪರಿಚಯವು ಆಗಿರುವುದಿಲ್ಲ. ಅದರ ಹೊರತಾಗಿ, ಇದು ಪವಿತ್ರಾತ್ಮನ ಮುಖಾಂತರ ದೇವರ ಅದ್ಭುತ ಕಾರ್ಯ ಆಗಿರುವಂಥದ್ದಾಗಿದೆ (1:18, 20; ಲೂಕ 1:35), ಮಾನವ ಕುಲದ ಅವಶ್ಯಕತೆಗೆ ಇದು ದೈವಿಕ ಪ್ರತಿಕ್ರಿಯೆಯಾಗಿದೆ.

*ಕನ್ಯೆಯಲ್ಲಿ ಜನನವು ಪ್ರವಾದನೆಯ ನೆರವೇರಿಕೆಯಾಗಿದೆ.* ಯೇಸು ಈ ಲೋಕದಲ್ಲಿ ಪ್ರವೇಶಿಸುವದು ಯೆಶಾಯನ ಅಂತಿಮ ಪ್ರವಾದನೆಯ ನೆರವೇರಿಕೆಯಾಗಿದೆ: "ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆಯುವಳು ಆತನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು" (1:23). ಕ್ರಿಸ್ತನು ಬರುವದರ ಮುಖಾಂತರ, ದೇವರು ತನ್ನ ವಾಗ್ದಾನಗಳನ್ನು ನೆರವೇರಿಸಿ ದಾವೀದನ ಸಿಂಹಾಸನಕ್ಕೆ ಆತನ ಸಂತತಿಯನ್ನು ಭದ್ರಪಡಿಸಿದನು (2 ಸಮುವೇಲ 7:12, 13; ಅಪೊಸ್ತಲರ ಕೃತ್ಯಗಳು 2:29-36).

*ಕನ್ಯೆಯಲ್ಲಿ ಜನನವು ಯೇಸುವಿನ ಪೂರ್ವಾಸ್ಥಿತ್ವವನ್ನು ವಿವರಿಸುತ್ತದೆ.* ಹೊಸ

ಒಡಂಬಡಿಕೆಯು ಕ್ರಿಸ್ತನು ಆರಂಭಕ್ಕೆ ಪೂರ್ವದಲ್ಲಿ ಇದ್ದನು ಎನ್ನುವದನ್ನು ಕಲಿಸುತ್ತದೆ. ಯೋಹಾನ 1:1 ಹೇಳುತ್ತದೆ, "ಆದಿಯಲ್ಲಿ ವಾಕ್ಯವಿತ್ತು, ಮತ್ತು ಆ ವಾಕ್ಯವು ದೇವರ ಬಳಿಯಲ್ಲಿತ್ತು ಮತ್ತು ಆ ವಾಕ್ಯವೇ ದೇವರಾಗಿತ್ತು." ಯೇಸು ಈ ಲೋಕದಲ್ಲಿ ಅದ್ಭುತವಾಗಿ ಬಂದನು ಎಂಬ ವಾಸ್ತವಿಕತೆ ಆತನು ಯಾವಗಲೂ ಇರುವಾತನಾಗಿದ್ದಾನೆ ಎಂಬ ನಿಜಾಂಶದೊಂದಿಗೆ ಪರಸ್ಪರ ಸೇರಿಕೊಂಡಿರುತ್ತವೆ.

*ಕನ್ಯೆಯಲ್ಲಿಯ ಜನನವು ಯೇಸು ಹೇಗೆ ಸಂಪೂರ್ಣ ದೇವರಾಗಿದ್ದಾನೆ ಮತ್ತು ಹೇಗೆ ಸಂಪೂರ್ಣ ಮಾನವನಾಗಿದ್ದಾನೆ ಎನ್ನುವದನ್ನು ವಿವರಿಸುತ್ತದೆ.* ಯೋಹಾನ 1:14 ಹೇಳುತ್ತದೆ, "ವಾಕ್ಯವೆಂಬುವನು ನರಾವತಾರವೆತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು," ಮರಿಯಳು (ಒಬ್ಬ ಮಾನವ ಸ್ತ್ರೀ) ಅದ್ಭುತವಾಗಿ ಮಧ್ಯಗಸ್ತನಾದ ಪವಿತ್ರಾತ್ಮನ (ದೇವರ) ಮುಖಾಂತರ ಗರ್ಭಧರಿಸಿದಳು, ಈ ರೀತಿಯಲ್ಲಿ ಒಂದೇ ಸಮಯದಲ್ಲಿ ಯೇಸು ದೈವಿಕನಾಗಿದ್ದನು ಮತ್ತು ಮಾನವನಾಗಿಯೂ ಇದ್ದನು ಎಂಬುದನ್ನು ಸೂಚಿಸುತ್ತದೆ (ನೋಡಿರಿ ಫಿಲಿಪ್ಪಿ 2:6, 7). ಆತನು ಕೇವಲ "ದಾವೀದ ಕುಮಾರನು" ಮಾತ್ರವಲ್ಲ ಆದರೆ ಆತನು "ದೇವಕುಮಾರನು." ಆತನು "ಇಮ್ಮಾನುವೇಲ್," "ದೇವರು ನಮ್ಮ ಸಂಗಡ" ಇದ್ದಾನೆ.

*ಕನ್ಯೆಯಲ್ಲಿ ಜನನವು ಅದು ಯೇಸು ಪುನರುತ್ಥಾನ ಮತ್ತು ಪರಲೋಕಕ್ಕೆ ಆರೋಹಣವಾಗುವದರಿಂದ ಪೂರ್ಣಗೊಂಡಿದೆ.* ಯೇಸು ಹೇಗೆ ಅದ್ಭುತವಾಗಿ ಈ ಲೋಕ ದೊಳಗೆ ಬಂದನೋ ಅದೇ ರೀತಿಯಲ್ಲಿ ಈ ಲೋಕವನ್ನು ಬಿಟ್ಟನು. ಆತನ ಮರಣದ ನಂತರ, ಮೂರನೆಯ ದಿನದಲ್ಲಿ ಎದ್ದು ಬಂದನು - ಆತನ ಬಲವಾದ ಕಾಲುಗಳು ಆತನ ದೈವತ್ವವನ್ನು ಸಾಕ್ಷಿಕರಿಸುತ್ತವೆ (ರೋಮಾಪುರ 1:4). ನಲವತ್ತು ದಿನಗಳ ಕಾಲ ಪ್ರತ್ಯಕ್ಷವಾಗಿ ಕಾಣಿಸಿಕೊಂಡನು, ಯೇಸು ಪರಲೋಕಕ್ಕೆ ಏರಿಹೋದನು. ತಂದೆಯ ಬಳಿಗೆ ಹಿಂತಿರುಗಿದನು (ಲೂಕ 24:51; ಅಪೊಸ್ತಲರ ಕೃತ್ಯಗಳು 1:9-11).

ಕನ್ಯೆಯ ಜನನ ನಿರಾಕರಿಸುವದು ವಾಕ್ಯದ ಪ್ರರೇಪಣೆಯನ್ನೂ ಮತ್ತು ಆದಿ ಕಾಲದ ಸಭೆಯ ಸಾಕ್ಷಿಯನ್ನೂ ನಿರಾಕರಿಸಿದಂತೆಯೆ ಆಗುತ್ತದೆ. ಇದು ಮರಿಯಳನ್ನು ವ್ಯಭಿಚಾರಿ ಎಂದು, ಯೇಸುವನ್ನು ಹಾದರಕ್ಕೆ ಹುಟ್ಟಿದ ಮಗು ಎಂದು ಭಾವಿಸಲು ಅವಕಾಶ ಕೊಡಬಹುದು. ಮುಂದೆ, ಯೇಸುವನ್ನು ಸುಳ್ಳುಗಾರನೆಂದು ಮತ್ತು ವಂಚಕನೆಂದು ಹೇಳಬಹುದು. ಕನ್ಯೆಯ ಜನನವನ್ನು ನಿರಾಕರಿಸುವದು ಯೇಸುವಿನ ದೈವತ್ವವನ್ನು ಮತ್ತು ಆತನ ರಕ್ಷಿಸುವ ಬಲವನ್ನು ನಿರಾಕರಿಸಿದಂತೆಯೇ.

David Stewart

## ಯೋಸೇಫನು (1:18-25)

ಯೋಸೇಫನ ಕುರಿತು ಸತ್ಯವೇದದ ದಾಖಲೆಗಳು ಹೆಚ್ಚಾಗಿ ಹೇಳಿರುವುದಿಲ್ಲ. ಈತನು ದಾವೀದನ ವಂಶದವನೆಂದು (1:16, 20) ನಜರೇತಿನಲ್ಲಿ ಇದ್ದವನೆಂದು (ಲೂಕ 2:4) ನಮಗೆ ಗೊತ್ತು, ಮರಿಯಳೊಂದಿಗೆ ನಿಶ್ಚಯವಾಗಿತ್ತು (ಲೂಕ 1:27) ಮತ್ತು ಈತನಿಗೆ ದೇವದೂತರಿಂದ ಆಕೆಯು ದೈವಿಕ ಮೂಲದಿಂದ ಗರ್ಭಧರಿಸಿದಳೆಂದು ಸೂಚನೆ ಕೊಡಲಾಯಿತ್ತು (1:18-21). ಯೋಸೇಫನು ನೀತಿವಂತನು ಮತ್ತು ಕರುಣೆತೋರಿಸುವವನು, ದೇವರ ವಾಕ್ಯಕ್ಕೆ ವಿಧೇಯತೆ ಯಿಂದಿರುವವನು ಆಗಿದ್ದನು (1:19; 24, 25; 2:14, 21, 22). ಕ್ರಿಸ್ತನ ಜನನದ ನಂತರ ನಜರೇತಿನಲ್ಲಿದ್ದನು ಮತ್ತು ಬಡಿಗನಾಗಿ ಕೆಲಸಮಾಡಿದನು (13:55). ಯೇಸು ಹನ್ನೆರಡು ವರ್ಷದವನಾಗಿದ್ದಾಗ ಮತ್ತು ತನ್ನ ಬುದ್ಧಿಯನ್ನು ವ್ಯಕ್ತಪಡಿಸಿದಾಗ ಅವರ ಕುಟುಂಬದ ಸಂಗಡ ಯೆರೂಸಲೇಮಿನಲ್ಲಿದ್ದನು. ನಂತರ ಕುಟುಂಬವು ನಜರೇತಿಗೆ ಹಿಂತಿರುಗಿ ಬಂತು, ಮತ್ತು ಯೋಸೇಫನು ಯೇಸುವಿಗೆ ಲೋಕದ ತಂದೆಯಂತೆ ತೋರಿಸಿಕೊಂಡು ಮುಂದುವರಿದನು (ಲೂಕ 2:41-52). ಈ ಸಮಯದ ನಂತರ, ಆತನಿಗೆ ಮತ್ತು ಮರಿಯಳಿಗೆ ಕನಿಷ್ಟ ಆರು ಜನ

ಮಕ್ಕಳಿದ್ದರು ಎನ್ನುವ ವಿಷಯ ಬಿಟ್ಟು, ಆತನ ಜೀವಿತದ ಕುರಿತು ಬೇರೆ ಏನು ಗೊತ್ತಿರುವುದಿಲ್ಲ (13:55, 56). ಕ್ರಿಸ್ತನು ಶಿಲುಬೆಯ ಮೇಲೆ ಮರಣ ಹೊಂದುವ ಸಮಯದಲ್ಲಿ ಯೋಸೇಫನು ಮರಣ ಹೊಂದಿದ್ದನೆಂದು ಸ್ಪಷ್ಟವಾಗಿ ಕಾಣಿಸುತ್ತದೆ (ಯೋಹಾನ 19:25-27).

## ಎರಡು ಖಾಲಿ ಸ್ಥಳಗಳು (1:18-25)

ಯೇಸುವಿನ ಕಥೆಗೆ ಇನ್ನೊಂದು ಮುಖವಿದೆ. ಅನೇಕರಿಗೆ ಕೂಸು ಬೇಕು ಆದರೆ ಮನುಷ್ಯನು ಬೇಕಾಗಿಲ್ಲ. ಅವರು ಯೇಸು ಚಿಕ್ಕ ಕೂಸು ಎಂದು ಅದರ ಜನನವನ್ನು ಆಚರಿಸುತ್ತಾರೆ, ಆದರೆ ಅವರು ಆತನನ್ನು ಕರ್ತನೆಂದು ಮತ್ತು ರಾಜನೆಂದು ಹೇಳುವಾಗ ನಿರಾಕರಿಸುತ್ತಾರೆ (ಅಪೊಸ್ತಲರ ಕೃತ್ಯಗಳು 2:14-47).

ಎರಡು ಖಾಲಿ ಸ್ಥಳಗಳು ಬಹಳ ವರ್ಷಗಳಿಂದ ಇವೆ: ಖಾಲಿಯಾದ ದನಗಳ ಕೊಟ್ಟಿಗೆ, ಖಾಲಿಯಾದ ಸಮಾಧಿ. ಯೇಸು ದನಗಳ ಕೊಟ್ಟಿಗೆಯಲ್ಲಿಯೇ ವಾಸಮಾಡುತ್ತಿಲ್ಲ. ಆತನು ಬೆಳೆದು ಪರಿಪೂರ್ಣನಾಗಿ ಪಾಪರಹಿತನಾಗಿ ಇದ್ದನು. ಆತನು ಬೋಧಿಸುವ ಮತ್ತು ಸ್ವಸ್ಥತೆ ಮಾಡುವ ಸೇವೆಯನ್ನು ಮಾಡಿದನು. ಅಂತಿಮವಾಗಿ, ಆತನು ನಮ್ಮ ಪಾಪಗಳನ್ನು ಕ್ಷಮಿಸುವದಕ್ಕಾಗಿ ಶಿಲುಬೆ ಮೇಲೆ ತ್ಯಾಗಿಯಾಗಿ ಮರಣ ಹೊಂದಿದನು. ಇಲ್ಲವಾದರೆ ಯೇಸು ಸಮಾದಿಯಲ್ಲಿಯೇ ಇರುತ್ತಾನೆ. ಯಾಕೆಂದರೆ ಆತನು ಪುನರುತ್ಥಾನಗೊಂಡನು, ಆತನ ಜನನ, ಜೀವಿತ, ಮತ್ತು ಮರಣಕ್ಕೆ ಒಂದು ರೀತಿಯ ಅರ್ಥವಿದೆ. ಈ ಲೋಕದಲ್ಲಿರುವ ಪ್ರತಿಯೊಬ್ಬರು ಯೇಸುವನ್ನು ಬಯಸದಿದ್ದರು ಸಹ, ಆತನು ಎಲ್ಲರಿಗೂ ಅತ್ಯಾವಶ್ಯಕವಾಗಿ ಬೇಕಾಗಿದ್ದಾರೆ (ಮಾರ್ಕ 16:15, 16; ಯೋಹಾನ 3:16-21; 7:7; 15:18, 19).

---

ಟಿಪ್ಪಣಿಗಳು

[1]ನೋಡಿರಿ ಲೂಕನು 1:26-56; 2:1-52; 8:19-21; ಯೋಹಾನ 2:1-11; 19:25-27. [2]Mishnah *Ketuboth* 1.2; 4.2. ಮಿಷ್ನ ಎಂಬುದು ಕ್ರಿ.ಶ. 200ರಲ್ಲಿ ಧರ್ಮಶಾಸ್ತ್ರದ ಕುರಿತು ಯೆಹೂದರ ಮೌಖಿಕ ಆಚಾರಗಳ ಶೇಕರಣೆಯಾಗಿವೆ. [3]1:20ರಲ್ಲಿ NASBನಲ್ಲಿ "ಯಂತೆ" ಎಂಬುದು ಸೇರಿಸಲಾಗಿದೆ. "ಮರಿಯಳನ್ನು ನಿನ್ನ ಹೆಂಡತಿಯಂತೆ ತೆಗೆದುಕೊ" ಎನ್ನುವ ಈ ವಾಕ್ಯಭಾಗದಲ್ಲಿ ಕಾಣಿಸುತ್ತದೆ. ಇದನ್ನು ಅಕ್ಷರಾಶಃವಾಗಿ "ನಿನ್ನ ಹೆಂಡತಿಯಾದ ಮರಿಯಳನ್ನು ತೆಗೆದುಕೊ" ಎಂದು ಅನುವಾದಿಸಲಾಗಿದೆ (ನೋಡಿರಿ NKJV). [4]Mishnah *Kiddushin* 4.9. [5]Mishnah *Gittin* 6.7; 9.4. [6]Ibid., 9.3. [7]Donald A. Hagner, *Matthew 1-13,* Word Biblical Commentary, vol. 33A (Dallas: Word Books, 1993), 18. ರಬ್ಬಿಯರ ಆಚಾರ ಪ್ರಕಾರವಾಗಿ ವಿವಾಹದಲ್ಲಿ ಅವಿಶ್ವಾಸಿಯನ್ನು ವಿಚ್ಛೇದನ ಮಾಡಬೇಕೆಂದು ಬಯಸುತ್ತದೆ. (Mishnah *Yebamoth* 2.8*; Sotah* 5.1.) [8]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 21. [9]D. A. Carson, *The Gospel According to John,* Pillar Commentary (Grand Rapids, Mich.: Wm. B. Eerdmans Publishing Co., 1991), 335. [10]Ibid., 591.

[11]Douglas R. A. Hare, *Matthew,* Interpretation (Louisville: John Knox Press, 1993), 9. [12]Ibid. [13]Hagner, 18. [14]Robert H. Mounce, *Matthew,* New International Biblical Commentary (Peabody, Mass.: Hendrickson Publishers, 1991), 10. [15]Ben Witherington III, "Birth of Jesus," in *Dictionary of Jesus and the Gospels,* ed. Joel B. Green and Scot McKnight (Downers Grove, Ill.: InterVarsity Press, 1992), 62. [16]Hagner, 17. [17]David Hill, *The Gospel of Matthew,* The New Century Bible Commentary (Grand Rapids, Mich.: Wm. B. Eerdmans Publishing Co., 1972), 78. [18]Ibid. ನೋಡಿರಿ ಯೆಶಾಯ 11:2; 42:1; ಯೆಹೋವೆಲ 2:28. [19]Sirach 46:1 (NRSV; ಒತ್ತಿ ಹೇಳಿದ್ದನ್ನು ಸೇರಿಸಲಾಗಿದೆ). [20]Leon

Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 29.

[21]ಯೆಶಾಯ 7:14ರ ಕುರಿತು ಹೆಚ್ಚಿನ ಅಭ್ಯಾಸಕ್ಕಾಗಿ ನೋಡಿರಿ H. C. Leupold, *Exposition of Isaiah* (Grand Rapids, Mich.: Baker Book House, 1968), 1:155-59. [22]Mounce, 10-11. [23]Witherington, 62. [24]ಹೇಗಿದ್ದರೂ, ವದಂತಿಗಳು ಹಬ್ಬ ಬಹುದು. ಯೆಹೂದ್ಯರಿಂದ ಈ ಹೇಳಿಕೆ ಕೊಡಲಾಗಿತ್ತು ("ನಾವು ಹಾದರಕ್ಕೆ ಹುಟ್ಟಿದವರಲ್ಲ"; ಯೋಹಾನ 8:41) ಕೆಲವು ಪಂಡಿತರಿಂದ ಇದು ಅರ್ಥವಾಯಿತು ಯೇಸುವಿನ ತಾಯಿ ಮದುವೆಯಾಗುವದಕ್ಕಿಂತ ಪೂರ್ವದಲ್ಲಿ ಗರ್ಭಧರಿಸಿದಳು ಎನ್ನುವ ಅಂಶದಿಂದ ಅವರು ಚುಚ್ಚುದರು. ನಂತರ ನಂಬಲಾರದ ಯೆಹೂದರು ಕ್ರೈಸ್ತರ ಮೇಲೆ ಈ ರೀತಿ ಹೇಳುತ್ತಾ ದಬ್ಬಾಳಿಕೆ ಮಾಡಿದರು ಯೇಸು "ಹಾದರಕ್ಕೆ ಹುಟ್ಟಿದ ಮಗು" ಅದು ಮರಿಯಳ ಮಗು. (*Origen Against Celsus* 1.28.) [25]ಮರಿಯಳ ಬಗ್ಗೆ, ಇನ್ನೂ ಹೆಚ್ಚಿನ ಸಿದ್ಧಾಂತಗಳ ಕುರಿತ ಮಾಹಿತಿಗಾಗಿ ನೋಡಿರಿ, Geoffrey W. Bromiley, "Mary," in *The International Standard Bible Encyclopedia,* rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1986), 3:268-73.

## ಒಂದು ಹತ್ತಿರದ ನೋಟ

## ಯೇಸು ಯಾವಾಗ ಜನಿಸಿದನು? (1:18-25)

ಯೇಸುವಿನ ಜನನದ ದಿನಾಂಕವು ಹೆಚ್ಚು ಕಡಿಮೆ ಅರಸನಾದ ಹೆರೋದನ ಆಡಳಿತಕ್ಕೆ ಸಂಬಂಧಿಸಿದೆ (37-4 ಕ್ರಿ.ಪೂ.). ಐತಿಹಾಸಿಕವಾಗಿ, ನಮಗೆಲ್ಲ ತಿಳಿದಿರುವಂತೆ ಹೆರೋದನು ಕ್ರಿ.ಪೂ. 4 ಎಪ್ರೀಲ್‌ನಲ್ಲಿ ಸತ್ತನು. ಯೇಸುವನ್ನು ಕೊಲ್ಲಿಸುವದಕ್ಕೆ ಹೆರೋದನು ವಿಚಾರಿಸಿದನು ಎನ್ನುವ ಅಂಶದ ಆಧಾರದ ಮೇಲೆ ಮತ್ತು ಸಹಜವಾಗಿ ಲೆಕ್ಕಹಾಕಿದರೆ ಯೇಸುವಿನ ವಯಸ್ಸು ಎರಡು ವರ್ಷವಿದ್ದಿರಬಹುದು (2:16), ಯೇಸು ಹೆಚ್ಚು ಕಡಿಮೆ ಕ್ರಿ.ಪೂ. 5ರಲ್ಲಿ ಹುಟ್ಟಿರಬಹುದು. ಆ ದಿನಗಳಲ್ಲಿ ಹೇಗೆ ಅವರು ದಿನಾಂಕದ ಕುರಿತು ಲೆಕ್ಕ ಹಾಕುತ್ತಿದ್ದರು ಎಂಬುದರ ಫಲಿತಾಂಶವಾಗಿ ಈ ದಿನಾಂಕದ ಕುರಿತು ಸಂಶಯವಿದೆ. ಆರನೇ ಶತಮಾನದಲ್ಲಿ ಕ್ರಿಸ್ತನ ಜನನದ ದಿನಾಂಕ ಕೊಡಲು ಪ್ರಯತ್ನಿಸಿದ ಕ್ಯಾಥೋಲಿಕ್ ಸನ್ಯಾಸಿಯಾಗಿದ್ದ Dionysius Exiguus[1] ರವರು ತಪ್ಪಾದ ಲೆಕ್ಕ ಹಾಕಿರುವದು ಇದಕ್ಕೆ ಸಂಬಂಧಿಸಿದೆ, ಸರಿಯಾದ ಲೆಕ್ಕ ಹಾಕುವದಕ್ಕೆ ಆತನಿಗೆ ಬೇಕಾಗಿರುವ ದಾಖಲೆಗಳು ಆತನ ಬಳಕೆಗೆ ಸಮೀಪದಲ್ಲಿರಲಿಲ್ಲ.

ರೋಮನ್ ಕ್ಯಾಥೋಲಿಕ್ ಬಿಷಪ್‌ರಾದ Liberius[2] ರವರ ಅಪ್ಪಣೆಯಿಂದ ಕ್ರಿಸ್ತನ ಜನನ ದಿನ ಡಿಸೆಂಬರ್ 25ರ ಆಚರಣೆಯು 360ರಲ್ಲಿ ಪ್ರಾರಂಭವಾಯಿತು. ಇದಕ್ಕೆ ಮುಂಚಿತವಾಗಿ, ಯೇಸುವಿನ ಜನನ ದಿನ ಆಚರಣೆಯು ಮಾರ್ಚ್ 20 ಅಥವಾ ಎಪ್ರಿಲ್ 18 ಆಗಿತ್ತು. ಸಭೆಯ ಅನೇಕ ಒಳಪಂಗಡಗಳ ಮಧ್ಯ ಸಂಧಾನಮಾಡಿಕೊಂಡ ಮೇಲೆ ಡಿಸೆಂಬರ್ 25ರ ಆಯ್ಕೆಯು ಆಗಿರುತ್ತದೆ. ಕತ್ತಲಿನ ಮೇಲೆ ಬೆಳಕು ಜಯ ಹೊಂದಿದೆ ಎಂದು ಆಚರಿಸುವ, "ಹೊಸ ಸೂರ್ಯ" ಅಥವಾ ಚಳಿಗಾಲದಲ್ಲಿ,[3] ರೋಮನ್ ಕ್ಯಾಥೋಲಿಕರ ಹಬ್ಬಗಳಾದ Saturnalia ಮತ್ತು Brumalia, ಹಬ್ಬದ ದಿನದಂದು, ಬಹುಶಃ ಈ ದಿನಾಂಕವನ್ನು ಆಯ್ಕೆ ಮಾಡಿಕೊಂಡಿರಬಹುದು. ಕಾನಸ್ಟಂಟಿನೋಪಲ್ 379ರಲ್ಲಿ ಮತ್ತು ಅಂತಿಯೋಕ್ಯ 380ರಲ್ಲಿ ಕ್ರಿಸ್ತನ ಜನನವು ಆಚರಿಸಿದರು. ಕ್ರಿಸ್ತನ ಹುಟ್ಟಿದ ದಿನಾಚರಣೆಯನ್ನು ನಿರಾಕರಿಸಿ, Origen ರವರು (c. 185-254) ಹೀಗೆ ಹೇಳಿದ್ದಾನೆ,

> ಕೇವಲ ಪಾಪಿಗಳು ಮಾತ್ರ ಈ ರೀತಿಯ ಆಚರಣೆಗಳನ್ನು ಮಾಡುತ್ತಾರೆ. ಐಗುಪ್ತದ ರಾಜ ಪರೋಹನು ತನ್ನ ಜನ್ಮದಿನದ ಆಚರಣೆಯನ್ನು ಉತ್ಸಾಹದೊಂದಿಗೆ ಮಾಡಿಕೊಡಿದ್ದನ್ನು ನಾವು ನಿಜವಾಗಿ ಹಳೆ ಒಡಂಬಡಿಕೆಯಲ್ಲಿ ಕಂಡಕೊಳ್ಳುತ್ತೇವೆ [ಆದಿಕಾಂಡ 40:20], ಮತ್ತು ಹೆರೋದನು ಹುಟ್ಟುಹಬ್ಬವನ್ನು ಆಚರಿಸಿದ್ದನು [ಮಾರ್ಕ 6:21][4] ಹೊಸ ಒಡಂಬಡಿಕೆಯಲ್ಲಿ ಕಂಡುಕೊಳ್ಳುತ್ತೇವೆ.

ಯೇಸು ಹುಟ್ಟಿರುವದು ನಮಗೂ ನಿಖರವಾಗಿ ಗೊತ್ತಿರದಿದ್ದರೂ ಸಹ, ಆತನು ಬಹುಶಃ ಸೆಪ್ಟೆಂಬರ್ ತಿಂಗಳಲ್ಲಿ ಹುಟ್ಟಿರಬಹುದು, ಡಿಸೆಂಬರ್‌ನಲ್ಲಿ ಅಲ್ಲ. ಯಾಕೆ? ಯಾಕೆಂದರೆ ಸ್ನಾನಿಕನಾದ ಯೋಹಾನನ ಬಗ್ಗೆ ನಮಗೆ ಗೊತ್ತಿರುವಂತೆ. ಯೋಹಾನನು ಯಾಜಕನಾದ ಜಕರಿಯಾ ಮತ್ತು ಆತನ ಹೆಂಡತಿ ಎಲಿಜಬೇತಳ ಮಗನಾಗಿದ್ದನು, ಯೇಸುವಿನ ತಾಯಿಯಾದ ಮರಿಯಳಿಗೆ ಸಂಬಂಧಿಯಾಗಿದ್ದರು: ಯೋಹಾನನು ಯೇಸುವಿಗಿಂತ ಆರು ತಿಂಗಳ ಮೊದಲು ಹುಟ್ಟಿದನು (ಲೂಕ 1:36). ಜಕರಿಯನಿಗೆ ದೇವ ದೂತರು ಹೇಳುವಾಗ, ಆತನು ದೇವಾಲಯದಲ್ಲಿ ತನ್ನ ಸೇವೆಯನ್ನು ಸಲ್ಲಿಸುತ್ತಿದ್ದನು. ಅಬೀಯನ ವರ್ಗಕ್ಕೆ ಸೇರಿದವನಾಗಿದ್ದನು (ಲೂಕ 1:5), ಇವನನ್ನು ಎಂಟನೆಯ ವರ್ಗಕ್ಕೆ ಸೇರಿದವನೆಂದು ಅರಸನಾದ ದಾವೀದನಿಂದ ಪಟ್ಟಿಕ್ರಮವನ್ನು ಮಾಡಲಾಯ್ತು (ನೋಡಿರಿ 1 ಪೂರ್ವಕಾಲವೃತ್ತಾಂತ 24:5-10).

ಕ್ರಿಸ್ತನ ಜನನಕ್ಕೆ ಇನ್ನೊಂದು ಆಧಾರ ಅಂಶವನ್ನು ಲೂಕ ಸುವಾರ್ತೆಯಲ್ಲಿ ಕಂಡುಕೊಳ್ಳುತ್ತೇವೆ: “ಆ ಕಾಲದಲ್ಲಿ ರಾಜ್ಯವೆಲ್ಲಾ ಖಾನೇಷುಮಾರಿ ಬರೆಸಿಕೊಳ್ಳಬೇಕೆಂಬ ಆಜ್ಞೆಯು ಚಕ್ರವರ್ತಿಯಾದ ಔಗಸ್ತನಿಂದ ಹೊರಟಿತು. ಕುರೇನ್ಯನು ಸುರಿಯಕ್ಕೆ ಅಧಿಪತಿಯಾಗಿದ್ದಾಗ ಈ ಮೊದಲನೆಯ ಖಾನೇಷುಮಾರಿ ನಡೆಯಿತು” (ಲೂಕ 2:1, 2). ಇತಿಹಾಸದ ದಾಖಲೆಗಳ ಪ್ರಕಾರ, Augustusನು ಕ್ರಿ.ಪೂ. 28ರಲ್ಲಿ ಖಾನೇಷು ಮಾರಿಗೆ ಆದೇಶಿಸಿದನು, ಇತರರು ಕ್ರಿ.ಪೂ. 8ರಲ್ಲಿ ಮತ್ತು ಕ್ರಿ.ಶ. 14ರಲ್ಲಿ ಮಾಡಿದರು. ಇವೆಲ್ಲವುಗಳು ಕ್ರಮವಾಗಿ ರೋಮಾ ನಾಗರೀಕತೆಯನ್ನು ಒಳಗೊಂಡಿತ್ತು. ಹೆರೋದನ ಆಳ್ವಿಕೆಯ ನಡೆಯುತ್ತಿರುವಾಗ ರಾಜ್ಯಧಾನಿಯು ರೋಮನ್ನರ ಪ್ರಾಂತದಲ್ಲಿ ಇರಲಿಲ್ಲ ಆದರೆ ರೋಮದೊಂದಿಗೆ ಸೇರಿಕೊಂಡು ಇದ್ದರು, ಹೆರೋದನು ಎರಡು ವರ್ಷ ಖಾನೇಷುಮಾರಿಯನ್ನು ವಿಳಂಬಮಾಡಿ ತನ್ನ ಸ್ವಾತಂತ್ರ್ಯವನ್ನು ತೋರಿಸಿದನು. ಇದು ಆತನ ಗುಣವಾಗಿತ್ತು. ಕೇವಲ ಈ ಖಾನೇಷುಮಾರಿ ಕುರೇನ್ಯನು ಸುರಿಯಕ್ಕೆ ಅಧಿಪತಿಯಾಗಿದ್ದಾಗ ಕ್ರಿ.ಶ. 6ರಲ್ಲಿ ಮಾತ್ರ ಇತ್ತು ಎನ್ನುವದು ಗೊತ್ತಿದೆ, ಅಥವಾ ಹೆರೋದನು ಸತ್ತ ಹತ್ತು ವರ್ಷಗಳ ಹತ್ತಿರದಲ್ಲಿ ಆಗಿರಬಹುದು. ಹೇಗಿದ್ದರೂ, ಲೂಕನು ಈ ಖಾನೇಷುಮಾರಿಯನ್ನು ಐತಿಹಾಸಿಕ ಆಧಾರದ ಮೇಲೆ ಪ್ರತಿಪಾದಿಸಿದ್ದಾನೆ. ಕುರೇನ್ಯನು ಸುರಿಯದಲ್ಲಿ ಅಧಿಪತಿಯಾಗಿ ಸೇವೆ ಸಲ್ಲಿಸಿದ್ದು ಕ್ರಿ.ಶ. 6 ಮತ್ತು 7ರಲ್ಲಿ ಎಂದು ನಮಗೆ ತಿಳಿದದ್ದೆ, ರೋಮಾನಲ್ಲಿರುವ ಲೇಟರನ್ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲ್ಪಟ್ಟ ಹಾಳಾಗಿರುವ ಸ್ಮಾರಕ ಲೇಖನಗಳು ಕ್ರಿಪೂ. 10ರಕಿಂತ ಮುಂಚಿತವಾಗಿರಬಹುದು ಎಂದು ಸೂಚಿಸುತ್ತದೆ. ನಿಜಾಂಶವೇನೆಂದರೆ, ಆಳವಾದ ಅಡೆತಡೆಗಳೊಂದಿಗೆ ಹೇಳುವುದಾದರೆ, ಕುರೇನ್ಯನು ಯಾವದೋ ಒಂದು ಹುದ್ದೆಯಲ್ಲಿ ಸುರಿಯದಲ್ಲಿ ಬಹುಶಃ ಕ್ರಿ.ಪೂ. 12 ರಿಂದ ಕ್ರಿ.ಶ. 16 ರವರೆಗೆ[5] ಅಧಿಪತಿಯಾಗಿ ನಿರ್ವಹಿಸಿರಬಹುದು. ಬಹಳವಾಗಿ ಕ್ರಿ.ಪೂ. 8ರಲ್ಲಿ Augustusನ ಮುಖಾಂತರ ಖಾನೆಷುಮಾರಿಯ ಆಜ್ಞೆ ಆಗಿರಬಹುದು ಎಂಬ ವಿಷಯವು ಪ್ರಶ್ನಿಸಲಾಗಿದೆ. ಮುಂದೆ, ಲೂಕನ ಆ ಭಾಗವು ಸರಿಯಾಗಿ ಅನುವಾದಿಸಿದಾಗ ಈ ಸಮಸ್ಯೆಯನ್ನು ಪರಿಹರಿಸಬಹುದೆಂದು Nigel Turner ಬರೆದಿದ್ದಾರೆ. ಆತನು ಈ ರೀತಿಯಲ್ಲಿ ಅನುವಾದ ಮಾಡಿದ್ದಾನೆ: “ಈ ಖಾನೆಷುಮಾರಿಯು ಕುರೇನ್ಯನು ಅಧಿಪತಿಯಾಗಿದ್ದಾಗ ತೆಗೆದುಕೊಂಡಿರುವ ಖಾನೆಷುಮಾರಿಗಿಂತ ಮೊದಲೆ ಇತ್ತು.”[6] ಆತನ ಅಭಿಪ್ರಾಯವು, ಏನೇ ಆದರೂ, ವಿಸ್ತಾರವಾಗಿ ಚರ್ಚಿಸುವಂಥದ್ದಾಗಿದೆ.

---

ಟಿಪ್ಪಣಿಗಳು

[1]Hans Achelis, “Dionysius Exiguus,” in Samuel Macauley Jackson, ed., *The New*

*Schaff-Herzog Encyclopedia of Religious Knowledge* (Grand Rapids, Mich.: Baker Book House, 1963), 3:441. [2]Philip Schaff, *History of the Christian Church,* vol. 3, *Nicene and Post-Nicene Christianity* (New York: Charles Scribner's Sons, 1916), 395. [3]Albert Henry Newman, "Christmas," in Samuel Macauley Jackson, ed., *The New Schaff-Herzog Encyclopedia of Religious Knowledge* (Grand Rapids, Mich.: Baker Book House, 1963), 3:48. [4]Origen *Homilies on Leviticus* 8.3. [5]Quirinius' ಜೀವನ ವೃತ್ತಿಯ ಬಗ್ಗೆ ಚರ್ಚಿಸಲಾಗಿದೆ Frederick W. Danker, *Jesus and the New Age: A Commentary on St. Luke's Gospel,* rev. and exp. (Philadelphia: Fortress Press, 1988), 23. [6]Jeffery L. Sheler, "The First Noel," *U.S. News and World Report* (21 December 1992): 84.